

# ಸಿಹಿ ಕಹಿ

ಸಂಪಾದಕರು : ಮಾರುತಿ ಹೊಸಮನಿ

Editor : MARUTI BASAVANTAPPA HOSAMANI

Cell : +91 97413 19119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 193 Wednesday 20-12-2023 E-mail : maruti.b.hosamani76@gmail.com Page: 4 Price : Rs. 1/-


## ಇಂಡಿ ಜಿಲ್ಲಾ ಕೇಂದ್ರವನ್ನಾಗಿ ಆಗ್ರಹಿಸಿ ರೈತರಿಂದ ಬೃಹತ್ ಪ್ರತಿಭಟನೆ



ಇಂಡಿ : ಪ್ರತ್ಯೇಕ ಜಿಲ್ಲೆ ಘೋಷಣೆಗೆ ಆಗ್ರಹಿಸಿ ತಾಲೂಕಿನ ಮಿರಗಿ ಮತ್ತು ಸಾಲೋಟಗಿ ಗ್ರಾಮದ ರೈತರು, ಪಟ್ಟಣದ ತೇಜಸ್ ಸಾಮಾಜಿಕ ಸಾಮಾಜಿಕ ಸಂಘ, ಸಮಗ್ರ ಇಂಡಿ ಕ್ಷೇಮಾಭಿವೃದ್ಧಿ ಸಂಘ, ಇಂಡಿ ಜಿಲ್ಲಾ ಹೋರಾಟ ಸಮಿತಿ ಮತ್ತು ಆರ್ಟಿಕಲ್ 371 ಜೆ ಹಕ್ಕು ಒತ್ತಾಯ ಸಮಿತಿ ವತಿಯಿಂದ ಮಿನಿ ವಿಧಾನಸೌಧ ಎದುರು ಪ್ರತಿಭಟನೆ ನಡೆಸಿದರು.

ಕೈಲಾಸಯ್ಯ ಹಿರೇಮಠ ಮಾತನಾಡಿ ಈಗಾಗಲೇ ಸರಕಾರ ಇಂಡಿ ಜಿಲ್ಲೆ ಮಾಡುವ ಕುರಿತು ಮಾಹಿತಿ ಸಂಗ್ರಹಿಸುತ್ತಿದೆ. ಅದಲ್ಲದೆ ದೇವರ ಹಿಪ್ಪರಗಿ, ಸಿಂದಗಿ, ಆಲಮೇಲ,ಇಂಡಿ ಮತ್ತು ಚಡಚಣ ಭಾಗದ ಪ್ರಮುಖ ಶ್ರೀಗಳನ್ನು , ಮಠಾಧೀಶರನ್ನು, ಗಣ್ಯ ಮಾನ್ಯರು, ನಾಗರಿಕರ, ರಾಜಕೀಯ ಧುರೀಣರ ಅಭಿಪ್ರಾಯ ಸಂಗ್ರಹಿಸಲು ಕೇಳಿ ಕೊಂಡಿದ್ದು ಈ ನಿಟ್ಟಿನಲ್ಲಿ ಕೆಲಸ ನಡೆಯುತ್ತಿದೆ. ಕಾರಣ ಮಾನ್ಯ ಮುಖ್ಯಮಂತ್ರಿಗಳು ಇಂಡಿ ತಾಲೂಕು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕು ಎಂದು ಆಗ್ರಹಿಸಿದರು.

ದೇವೇಂದ್ರ ಬರಡೋಲ ಮಾತನಾಡಿ ಜಿಲ್ಲಾ ಕೇಂದ್ರಕ್ಕೆ ಯೋಗ್ಯವಾದ ಭೌಗೋಳಿಕ ಪ್ರದೇಶ ಮತ್ತು ಸರಕಾರಿ ಕಚೇರಿಗಳನ್ನು ಹೊಂದಿರುವ ಇಂಡಿಯನ್ನು ಜಿಲ್ಲಾ ಕೇಂದ್ರ ವನ್ನಾಗಿಯಾಗಿಸ ಬೇಕು. ಇಲ್ಲದಿದ್ದರೆ ತಾಲೂಕಿನ ಎಲ್ಲ ಭಾಗದ ರೈತರು ಸಹಕಾರ ಕೋರಿ ಎಲ್ಲರೂ ಒಕ್ಕಟ್ಟಿನಿಂದ ಹೋರಾಟ ಮಾಡುವುದಾಗಿ ತಿಳಿಸಿದರು. ಚನ್ನಪ್ಪ ಶ್ರೀಗಿರಿ ಮಾತನಾಡಿ ಸರಕಾರ ನಮ್ಮ ಮನವಿ ಪರಿಗಣಿಸಿ ಇಂಡಿ ಜಿಲ್ಲಾ ಕೇಂದ್ರ ವನ್ನಾಗಿ ಘೋಷಿಸಬೇಕು. ಇಲ್ಲದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಪವಾಸ ಸತ್ಯಾಗ್ರಹ ಸೇರಿದಂತೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ಹೋರಾಟ ಸಮಿತಿಯ ಮಂಜುನಾಥ ಕಾಮಗೊಂಡ,ಕಾರ್ಯದರ್ಶಿ ಸಂತೋಷ ಪಾಪಣ್ಣನವರ ನಿವೃತ್ತ ಪ್ರಾಚಾರ್ಯ ಎ.ಎಸ್.ಗಾಣಿಗೇರ, ಶ್ರೀಶೈಲ ತೋನಶ್ಯಾಳ,ವಿಠ್ಠಲ ಬೋಳೆಗಾಂವ, ವಿಠ್ಠಲ ಸಾಳುಂಕೆ, ಶಕೀಲ ಮುಲ್ಲಾ, ಶ್ರೀಶೈಲ ಮಠಪತಿ, ಶರಣು ಬೊರಟಗಿ, ದತ್ತು ಸರ್, ಕೆಪಿಸಿಸಿ ಸದಸ್ಯ ಮಲ್ಲನಗೌಡ ಪಾಟಿಲ, ಶಿವಯೋಗಪ್ಪ ಜೋತಗೊಂಡ, ಜೀತಪ್ಪ ಕಲ್ಯಾಣಿ,ಅಪ್ಪು ಅಡಗಲ್ಲ ಮತ್ತಿತರಿದ್ದರು.

**ತಾಲೂಕ ವರದಿಗಾರರು: ಶಿವಪ್ಪ.ಬಿ.ಹರಿಜನ. ಇಂಡಿ**

## ಪಟ್ಟಣದ ಊರಮ್ಮ ಹೊಂಡದ ಹತ್ತಿರದ ಶ್ರೀ ಲಕ್ಷ್ಮೀ ನರಸಿಂಹ ಹಾಗೂ ಹಳ್ಳದರಾಯನಿಗೆ ಕಾರ್ತಿಕೋತ್ಸವ ನೆರವೇರಿತು



ಕೂಡ್ಲಿಗಿ : ಪಟ್ಟಣದ ಊರಮ್ಮ ಹೊಂಡದ ತಟದಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿಗೆ ಹಾಗೂ ಹಳ್ಳದರಾಯನಿಗೆ ವಿಶೇಷ ಪೂಜೆ,ಅಲಂಕಾರ ದೊಂದಿಗೆ ಕಾರ್ತಿಕೋತ್ಸವವನ್ನು ನೆರವೇರಿಸಲಾಯಿತು. ಮುಂಜಾನೆಯಿಂದಲೇ, ಭಕ್ತರು ಆಗಮಿಸಿ ಹಣ್ಣು,ಕಾಯಿ, ಹೂವುಗಳನ್ನು ಸಮರ್ಪಿಸುವುದರ ಮೂಲಕ ಭಕ್ತಿಭಾವ ಮೆರೆದರು. ಕೆಲ ಭಕ್ತರು ವಿಶೇಷ ಪೂಜೆಯನ್ನು ನೆರವೇರಿಸಿದರು. ಕಾರ್ತಿಕೋತ್ಸವದ ಸಂಭ್ರಮ ವಾದ್ದರಿಂದ ಶ್ರೀಲಕ್ಷ್ಮೀ ನರಸಿಂಹಸ್ವಾಮಿಗೆ ಬೆಳ್ಳಿಯ ಅಲಂಕಾರದೊಡನೆ ವಿವಿಧ ಪುಷ್ಪ ಹಾಗೂ ತುಳಿಸಿ ಹಾರದೊಡನೆ ಅಲಂಕರಿಸಲಾಯಿತ್ತು. ಇದೇ ದೇವಾಲಯದ ಪ್ರಾಂಗಣದಲ್ಲಿರುವ ಹಳ್ಳದರಾಯನಿಗೆ ವಿಶೇಷ ಅಲಂಕಾರ ನೆರವೇರಿಸುವ ಮೂಲಕ ಆಂಜನೇಯ ಸ್ವಾಮಿ ಆಕರ್ಷಕವಾಗಿ ಕಾಣುವಂತೆ ಶೃಂಗರಿಸಲಾಯಿತು. ಪಟ್ಟಣದ ಭಕ್ತರು ಪ್ರಾಣ ದೇವರಿಗೆ ಹಾಗೂ ಉಗ್ರ ನರಸಿಂಹಸ್ವಾಮಿಗೆ ನೂರಾರು ಹಣತೆಗಳನ್ನು ಹಚ್ಚುವ ಮೂಲಕ ದೀಪ ದಾರತಿಯನ್ನು ಅರ್ಪಿಸುವುದು ಸಂಜೆಯಿಂದಲೇ ನಡೆದಿತ್ತು. ಕೆಲವರಿಗೆ ಶ್ರೀಲಕ್ಷ್ಮೀ ನರಸಿಂಹ ಕುಲ ದೇವರು ಆಗಿರುವುದರಿಂದ ವಿಶೇಷ ಪೂಜೆ ನೆರವೇರಿಸುವುದರ ಮೂಲಕ ಹೊಸ ಬಟ್ಟೆಗಳನ್ನು ತೊಟ್ಟು ಸಂಭ್ರಮಿಸಿದರು. ಅರ್ಚಕರು ಪ್ರಾಥ:ಕಾಲದಿಂದಲೇ ಬಂದ ಭಕ್ತರಿಗೆ ಮಹಾ ಮಂಗಳಾರತಿಯೊಂದಿಗೆ ತೀರ್ಥ,ಪ್ರಸಾದವನ್ನು ಹಂಚುವುದು ನಡೆದಿತ್ತು.

**ಜಿಲ್ಲಾ ವರದಿಗಾರರು: ರಾಘವೇಂದ್ರ. ಬಿ. ಸಾಲುಮನೆ. ಕೂಡ್ಲಿಗಿ**

## ಶ್ರೀ ಶರಣ ಬಸವೇಶ್ವರ ರಥೋತ್ಸವದ ಪ್ರಯುಕ್ತ ಶಾಂತಿ ಸಭೆ



ಕಾನಾಮಡುಗು : ಕೂಡ್ಲಿಗಿ ತಾಲೂಕಿನ ಕಾನ ಹೊಸಹಳ್ಳಿ ಹೋಬಳಿ ವ್ಯಾಪ್ತಿಗೆ ಬರುವ ಕಾನ ಮಡಗು ಗ್ರಾಮದಲ್ಲಿ ದಿನಾಂಕ 21-12-2023 ರಿಂದ23-12-2023.ರ ವರೆಗೆ ನಡೆಯಲಿರುವ ಶ್ರೀ ಶರಣ ಬಸವೇಶ್ವರ ರಥೋತ್ಸವದ ಪ್ರಯುಕ್ತ ಮಂಗಳವಾರ ದೇವಸ್ಥಾನದ ಆವರಣದಲ್ಲಿ ಶಾಂತಿ ಸಭೆ ಜರಿಗಿತು.

ಈ ಶಾಂತಿ ಸಭೆಯಲ್ಲಿ ಕೊಟ್ಟೂರು ವೃತ್ತದ ಸಿಪಿಐ ವೆಂಕಟಸ್ವಾಮಿ ಯವರು ಮಾತನಾಡಿ, ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಇಸ್ಪೀಟು ಜೂಜು, ಮದ್ಯಪಾನ ಸೇರಿದಂತೆ ಕಾನೂನು ಬಾಹಿರ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ, ಅಂತಹ ಚಟುವಟಿಕೆಗಳು ಕಂಡು ಬಂದಲ್ಲಿ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದು. ಪ್ರತಿಯೊಬ್ಬ ನಾಗರಿಕರು, ಊರಿನ ಗ್ರಾಮಸ್ಥರು ಮುಖಂಡರು ರಥೋತ್ಸವದಲ್ಲಿ ಯಾವುದೇ ತರಹದ ಅಹಿತಕರ ಘಟನೆಗಳು ಆಗದಂತೆ ಶಾಂತಿ ಸೌಹಾರ್ದತೆಯಿಂದ ಎಲ್ಲರೂ ಐಕ್ಯತೆಯಿಂದ ಶ್ರೀ ಶರಣ ಬಸವೇಶ್ವರ ರಥೋತ್ಸವದ ಕಾರ್ಯ ಕ್ರಮಗಳನ್ನು ನಡೆಸಿ ಶರಣೇಶ್ವರನ ಕೃಪಾಶೀರ್ವಾದಕ್ಕೆ ಪಾತ್ರರಾಗಿ, ಇಂತಹ ಕಾರ್ಯ ಕ್ರಮಗಳಿಗೆ ಗ್ರಾಮಸ್ಥರ ಸಹಕಾರ ಅತಿ ಮುಖ್ಯ ನಮ್ಮ ಇಲಾಖೆಯೂ ಕೂಡ ನಿಮ್ಮ ಜೊತೆಯಲ್ಲಿ ಇರುತ್ತದೆ ಕಾರಣ ಪ್ರತಿಯೊಬ್ಬರೂ ಶಾಂತಿಯಿಂದ ಜಾತ್ರೆಯನ್ನು ಆಚರಣೆ ಮಾಡಿ ಎಂದು ಈ ಸಂದರ್ಭದಲ್ಲಿ ಮಾತನಾಡಿದರು

ಕಾನಾಮಡಗು ದಾಸೋಹ ಮಠದ ಧರ್ಮಾಧಿಕಾರಿಗಳಾದ ಐ. ಮುಡಿ. ಶರಣಾರ್ಯರು ಮಾತನಾಡಿ ನಾಡಿನಾದ್ಯಂತ ಸಾವಿರಾರು ಭಕ್ತಾದಿಗಳು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವುದರಿಂದ ಪ್ರತಿ ವರ್ಷದಂತೆ ಗ್ರಾಮಸ್ಥರು, ಬರುವ ಭಕ್ತಾದಿಗಳು ಹಾಗೂ ಸಾರ್ವಜನಿಕರ ರೊಂದಿಗೆ ಸಹಕರಿಸಿರಿ ಎಂದು ಈ ಶಾಂತಿ ಸಭೆಯಲ್ಲಿ ಮಾತನಾಡಿದರು

ಈ ಸಂದರ್ಭದಲ್ಲಿ, ಕಾನಾ ಹೊಸಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಎಚ್ ನಾಗರತ್ನಮ್ಮ ಮತ್ತು ಪೊಲೀಸ್ ಸಿಬ್ಬಂದಿ. ಕಾನಮಡಗು ನಿವೃತ್ತ ಶಿಕ್ಷಕ ನೀರಗಂಟಿ ಶರಣಪ್ಪ. ಬಿ ಚನ್ನಪ್ಪ, ಚನ್ನವೀರ ಸ್ವಾಮಿ ನಿವೃತ್ತಿ ಶಿಕ್ಷಕ ಗಂಗಣ್ಣ , ಆಲೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಂಜಣ್ಣ ಮತ್ತು ಸಿಬ್ಬಂದಿ ವರ್ಗ ಸೇರಿದಂತೆ ಕಾನಮಡಗು ಗ್ರಾಮದ ದೈವಸ್ಥರು, ಮುಖಂಡರು ದಲಿತ ಕೇರಿಯ ಮುಖಂಡರು, ಗ್ರಾಮಸ್ಥರು ಸಾರ್ವಜನಿಕರು ಉಪಸಿತರಿದ್ದರು.

**ಹೋಬಳಿ ವರದಿಗಾರರು: ಕೆ.ಎಸ್. ವೀರೇಶ್. ಕಾನಾ ಹೊಸಹಳ್ಳಿ**

## ದಿ.ಜಗನ್ನಾಥ ಟಂಕಸಾಲಿ ಪ್ರತಿಷ್ಠಾನದ ಪ್ರಶಸ್ತಿ ಪ್ರಧಾನ ಪತ್ರಿಕಾರಂಗಕ್ಕೆ ಟಂಕಸಾಲಿಯವರ ಕೊಡುಗೆ ಅಪಾರ: ಸಪನಾ



ಮುಧೋಳ: ಇಂದಿನ ದಿನಗಳಲ್ಲಿ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಬೆಳೆಯಬೇಕಾದರೆ ನಾವು ಇತರೆ ಭಾಷೆ ಗೌರವಿಸುವುದರ ಜೊತೆಗೆ ನಮ್ಮ ಮಾತೃ ಭಾಷೆಯನ್ನು ಪ್ರೀತಿಸಬೇಕು ಪತ್ರಿಕಾರಂಗದಲ್ಲಿ ಶಕ್ತಿಯಾಗಿ ಬೆಳೆದು ಹಿಂದಿ ಭಾಷೆಯನ್ನು ಬೆಳಸಿದ ಕೀರ್ತಿ ಟಂಕಸಾಲಿಯವರಿಗೆ ಸಲ್ಲುತ್ತದೆ. ಎಂದು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕಿ ಸಪನಾ ಅನಿಗೋಳ ಹೇಳಿದರು.

ದಿ.ಜಗನ್ನಾಥರಾವ್ ಟಂಕಸಾಲಿ ಪ್ರತಿಷ್ಠಾನ ಹಾಗೂ ಹಿಂದಿ ಪ್ರಚಾರ ಸಂಘ ಮುಧೋಳ ಸಂಯುಕ್ತ ಆಶ್ರಯದಲ್ಲಿ ಟಂಕಸಾಲಿ ಭವನದಲ್ಲಿ ಜರುಗಿದ ದಿ.ಜಗನ್ನಾಥರಾವ ಟಂಕಸಾಲಿ ಸ್ಮರಣಾರ್ಥ 23ನೇ ಪ್ರಶಸ್ತಿ ಪ್ರಧಾನ ಹಾಗೂ ಸನ್ಮಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭಾಷೆಯಲ್ಲಿ ಶಕ್ತಿತುಂಬೇಕಾದರೆ ನಿರಂತರ ಓದಬೇಕು. ಇಂದಿನ ದಿನಗಳಲ್ಲಿ ಮಾಧ್ಯಮಗಳು ಅತ್ಯಂತ ಜವಾಬ್ದಾರಿಯುತ ಕೆಲಸವನ್ನು ಮಾಡುತ್ತಿವೆ. ದಿ.ಟಂಕಸಾಲಿಯವರು ಅಂದು ಈ ಭಾಗದಲ್ಲಿ ಕನ್ನಡ ಪತ್ರಿಕೆಯನ್ನು ಬೆಳೆಸಿ ಪತ್ರಿಕಾರಂಗ ಮುನ್ನಡಿಸಿದ ದಿಮಂತ ವ್ಯಕ್ತಿಯಾಗಿರದೆ ಶಕ್ತಿಯಾಗಿದ್ದರು. ಅವರ ಪತ್ರಿಕಾರಂಗದ ಕೊಡುಗೆ ಹಾಗೂ ಹಿಂದಿ ಭಾಷೆಯ ಬೆಳವಣಿಗೆಗೆ ವಿಶೇಷ ಕೊಡುಗೆ ಇದೆ. ಎಂದು ಅವರು ಹೇಳಿದರು.

ಪ್ರಶಸ್ತಿ ಪಡೆದ ಸ್ಥಳಿಯ ವರದಿಗಾರ ವೆಂಕಟೇಶ ಗುಡೆಪ್ಪನವರ ಮಾತನಾಡಿ ಸಮಾಜದಲ್ಲಿ ನಮ್ಮನ್ನು ಗುರ್ತಿಸಬೇಕಾದರೆ ಸಮಾಜಕ್ಕೆ ಉಪಯುಕ್ತವಾದ ಅಭಿವೃದ್ಧಿಪರ ಹಾಗೂ ಸಮಸ್ಯೆಗಳ ಮೇಲೆ ಬೆಳಕು ಚಲ್ಲುವ ಸುದ್ದಿಯನ್ನು ಬರೆಯಬೇಕು. ಅಂತಹ ಸುದ್ದಿಗಳು ಹಾಗೂ ನನ್ನ ಪತ್ರಿಕೆ ಹಾಗೂ ನಿರಂತರತೆಯಿಂದ ಮಾಡಿದಕಠಿಣ ಕೆಲಸ ಕುಟುಂಬ ಸಮಾಜದ ಸಹಕಾರ ನನ್ನ ಸಾಧನೆಯ ಶ್ರೇಯಸ್ಸು, ಪತ್ರಕರ್ತರು ವಸ್ತುನಿಷ್ಠ ವರದಿಗಳತ್ತ ಗಮನ ಹರಿಸಿ ಸುದ್ದಿಯ ಸತ್ಯಾಸತ್ಯತೆಯನ್ನು ಅರಿತು ಪ್ರಕಟಿಸುವ ಕಾರ್ಯ ಮಾಡಬೇಕು ಪ್ರಜಾ ಪ್ರಭುತ್ವ ವ್ಯವಸ್ಥೆಯಲ್ಲಿ ಮೂರು ಅಂಗಗಳು ಲೋಪವಾದಾಗ ಅವುಗಳನ್ನು ವಿಮರ್ಶೆ ಮಾಡಿ ದಾರಿಗೆ ತರುವಲ್ಲಿ ಪತ್ರಿಕಾರಂಗದಕಾರ್ಯ ಬಹುಮುಖ್ಯ ಪಾತ್ರ ವಹಿಸುತ್ತದೆ. ಎಂದು ಹೇಳಿದರು.

ಪತ್ರಕರ್ತ ವಿಶ್ವನಾಥ ಮುನವಳ್ಳಿ ಮಾತನಾಡಿ, ಪತ್ರಿಕಾರಂಗ ಉದ್ಯಮ ಆಗಿದೆ, ಸುದ್ದಿಯಲ್ಲಿ ತೀವ್ರ ಪೈಪೋಟಿ ಇದ್ದು ಇತರ ಒತ್ತಡದ ಬದುಕಿನಲ್ಲಿ ಸುದ್ದಿಯನ್ನು ಪ್ರಕಟನೆ ಮಾಡುವುದು ಒಂದು ಸಾಹಸದ ಕಾರ್ಯವಾಗಿದೆ. ನನ್ನ ಕುಟುಂಬದಿಂದ ಬಳುವಳಿಯಾಗಿ ಬಂದ ಪತ್ರಿಕಾರಂಗದಿಂದ ಈ ಮಟ್ಟದಲ್ಲಿ ಬೆಳೆದು ನಿಲ್ಲಲು ಸಾಧ್ಯವಾಗಿದೆ. ಎಂದು ಹೇಳಿದರು.

ಹಿಂದಿ ಸಾಹಿತಿ ಜಗದೀಶ ಮಳಗಿ ಮಾತನಾಡಿ, ಹಿಂದಿ ರಾಷ್ಟ್ರ ಭಾಷೆಯನ್ನು ಗೌರವಿಸುವದರ ಜತೆ ಮಾತೃ ಭಾಷೆಯನ್ನು ಪ್ರೀತಿಸೋಣ ಹಿಂದಿ ಭಾಷೆಯನ್ನು ಎಲ್ಲರೂ ಕಲಿಯುವದರಿಂದ ಅದರಲ್ಲಿನ ಸಿಹಿ ಎಲ್ಲೆಡೆ ಪಸರಿಸುತ್ತದೆ ಈ ಭಾಷೆ ಎಲ್ಲ ಭಾಷೆಗಳನ್ನು ಜೋಡಿಸುವ ಭಾಷೆ, ಹೃದಯದ ಭಾಷೆ ಆಗಿದೆ. ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ನ್ಯಾಯವಾದಿ ಮಿಲಿಂದ ಟಂಕಸಾಲಿ ಹಿರಿಯ ಸಾಹಿತಿ ಕೆ. ಎಂ. ಪೆಟ್ಲೂರ ಸಾಂದರ್ಭಿಕವಾಗಿ ಮಾತನಾಡಿದರು,

ಸಾಹಿತಿ ಡಾ.ಸಿದ್ದು ದಿವಾಣ, ಅನಸೂಯಾ ಉತ್ತೂರ, ಡಾ.ಶಿವಾನಂದ ಕುಬಸದ, ಎಸ್.ಜಿ. ಹವಾಲ್ದಾರ, ಟಿ.ಕೆ. ಹಂಚಾಟೆ, ಶಶಿದರ ಬುದ್ನಿ, ಅಕ್ಷಯ ಟಂಕಸಾಲಿ, ಕುಮಾರ ಹಿರೆಸೋಮಣ್ಣವರ, ಸಿದ್ದು ಕಾಳಗಿ, ಸುರೇಶ ಚಿಪ್ಪಲಕಟ್ಟಿ, ಮಹಾದೇವ ಮಡಿವಾಳರ ಪತ್ರಕರ್ತರಾದ ಎಂ.ಎಚ್. ನದಾಪ್, ಗಣೇಶ ಮೇತ್ರಿ, ಬಿ. ಎಚ್. ಬೀಳಗಿ, ಎಲ್.ಬಿ.ಹಳ್ಳದ, ಉದಯ ಕುಲಕರ್ಣಿ, ಜಗದೀಶ ಜೀರಗಾಳ, ಮಹಾಂತೇಶ ಕರೆಹೊನ್ನ, ಶಂಕರ ಪಾಟೀಲ್, ಮಲ್ಲಿಕಾರ್ಜುನ ಹೆಗ್ಗಳಗಿ ಇತರರಿದ್ದರು.

ನ್ಯಾಯವಾದಿ ರಾಮಕೃಷ್ಣ ಬುದ್ನಿ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಪದ್ಮಾ ಪತ್ತಾರ ಹಾಗೂ ಸಂಗಡಿಗರು ಪ್ರಾರ್ಥಿಸಿದರು, ತುಕಾರಾಮ ಹಂಚಾಟೆ ಪರಿಚಯಿಸಿದರು, ಉದಯ ವಾಳ್ವೇಕರ, ರಶ್ಮಿ ಗಿರಿಡ್ಡೇರ ನಿರೂಪಿಸಿ ವಂದಿಸಿದರು.

## ಮೂರು ಜೋಡಿಗಳನ್ನು ಒಂದುಗೂಡಿಸಿದ ಲೋಕ ಅದಾಲತ್!

ಬಾದಾಮಿ : ಇಲ್ಲಿನ ನ್ಯಾಯಾಲಯದಲ್ಲಿ ಶನಿವಾರ ನಡೆದ ಬೃಹತ್ ಲೋಕ ಅದಾಲತ್ ನಲ್ಲಿ ಮೂರು ಜೊತೆ ಜೋಡಿಗಳು ಒಂದಾಗಿ ಬಾಳ್ವೆ ಮಾಡಲು ಪರಸ್ಪರ ಒಪ್ಪಿಕೊಂಡರು. ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ಈ ಮೂರು ಕುಟುಂಬದವರಿಗೆ ಸತಿ, ಪತಿಗಳಿಗೆ ತಿಳಿಹೇಳಿ ಮನಸ್ಸು ಪರಿವರ್ತನೆ ಮಾಡಿ "ಬೃಹತ್ ಲೋಕ ಅದಾಲತ್" ನಲ್ಲಿ ಒಂದುಗೂಡಿಸಲಾಯಿತು. ಈ ಸಂದರ್ಭದಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶ ವಿ.ಹನುಮಂತಪ್ಪ, ಪ್ರಧಾನ ದಿವಾಣಿ ನ್ಯಾಯಾಧೀಶ ಸಂಜುಕುಮಾರ ಪಾಚಾಪುರೆ, ನ್ಯಾಯವಾದಿಗಳಾದ ಕೆ.ವಿ.ಕೆರೂರ, ಎಸ್.ವಿ.ಹಿರೇಮಠ, ವಿ.ಆರ್.ಮುಣ್ಣೂರಮಠ, ಎಸ್.ವಿ.ಯಲಿಗಾರ, ಯಮನೂರ ನಾಯಕ, ಆರ್.ಪಿ.ಹಿಂದಿನಮನಿ, ಜ್ಯೋತಿಮುತಾಲಿಕ ದೇಸಾಯಿ, ಎಸ್.ಎಂ.ಪಾಟೀಲ ಸೇರಿದಂತೆ ಇತರರು ಹಾಜರಿದ್ದರು.

## ಶ್ರೀ ಗೋವಿಂದಪ್ಪ ನಿವೃತ್ತಿ ಶಿಕ್ಷಕರಿಗೆ ಬೀಳ್ಕೊಡುಗೆ



ಹೂಡೇಂ : ಕಾನ ಹೊಸಹಳ್ಳಿ ಸಮೀಪದ ಹೂಡೇಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಿರಂತರ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕ ಶ್ರೀ ಗೋವಿಂದಪ್ಪ ಅವರನ್ನು ಶಿಕ್ಷಕರು, ಎಸ್ಡಿಎಂಸಿ ಸದಸ್ಯರು, ವಿದ್ಯಾರ್ಥಿಗಳು ಹಾಗೂ ಹಳೆ ವಿದ್ಯಾರ್ಥಿಗಳು ಸನ್ಮಾನಿಸಿ ಬೀಳ್ಕೊಟ್ಟರು. ಶಿಕ್ಷಕರಾಗಿ 1988ರಲ್ಲಿ ಶಿಕ್ಷಕರಾಗಿ ಕರ್ತವ್ಯಕ್ಕೆ ಸೇರಿದ್ದು ಇಂದು ಕರ್ತವ್ಯದಿಂದ ನಿವೃತ್ತಿ ಆಗಿರುತ್ತಾರೆ.

36 ವರ್ಷ ಸೇವೆ ಸಲ್ಲಿಸಿದರು. ಶ್ರೀ ಗೋವಿಂದಪ್ಪ ಅವರು ಈ ಶಾಲೆಯ ಮಕ್ಕಳಲ್ಲಿಯೆ ತಮ್ಮ ಭವಿಷ್ಯವನ್ನು ಕಂಡವರು.

ಹೆಚ್ಚು ಸಮಯವನ್ನು ಶಾಲೆಗಾಗಿಯೆ ಮೀಸಲಿಟ್ಟಿದ್ದಾರೆ. ಇಂತಹ ಶಿಕ್ಷಕರು ಸಿಗುವುದು ತುಂಬಾ ಅಪರೂಪ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಕಾರ್ಯ ಕ್ರಮದಲ್ಲಿ ಗ್ರಾ.ಪಂ ಅಧ್ಯಕ್ಷ ರಾಮಚಂದ್ರಪ್ಪ ಹಾಗೂ ಮುಖ್ಯ ಗುರುಗಳು ನರಸಿಂಹ ರೆಡ್ಡಿ, ಕಂಬಳರಂಗ ಪ್ರೌಢಶಾಲೆ ಮುಖ್ಯ ಗುರುಗಳು ಅಜ್ಜಪ್ಪ, ಹುರುಳಿಹಾಳ್ ಹೊನ್ನಾಂಬಿಕಾ ಪ್ರೌಢಶಾಲೆಯ ಮುಖ್ಯ ಗುರುಗಳು ಕರಿಬಸಪ್ಪ, ಶಿಕ್ಷಕರಾದ ಮಚ್ಚೇಂದ್ರಪ್ಪ, ಅನ್ನಪೂರ್ಣಮ್ಮ, ಮಂಜುಳಾ, ಶಾಂತಕುಮಾರಿ, ನಿವೃತ್ತಿ ಶಿಕ್ಷಕರಾದ ಕಾಮಯ್ಯ, ನಾಗರಾಜ್, ಜಂಬಣ್ಣ, ಗ್ರಾ.ಪಂ ಸದಸ್ಯರಾದ ಅಜ್ಜಣ್ಣ, ಎಲ್ಲಪ್ಪ, ಊರಿನ ಮುಖಂಡರಾದ ಜಿ ಬಸಯ್ಯ, ಪಾಪಣ್ಣ ಬಿ ಎಸ್, ಕೆ ರಾಜಶೇಖರ್, ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು, ನಿವೃತ್ತಿ ಶಿಕ್ಷಕರು ಹಾಗೂ ಎಸ್ಡಿಎಂಸಿ ಅಧ್ಯಕ್ಷರು, ಸರ್ವ ಸದಸ್ಯರು ಹಾಗೂ ಅಕ್ಷರ ದಾಸೋಹ ಸಿಬ್ಬಂದಿ ವರ್ಗದವರು, ಶಾಲೆಯ ಹಳೆಯ ವಿದ್ಯಾರ್ಥಿಗಳು, ಪ್ರಸಕ್ತ ವರ್ಷದ ವಿದ್ಯಾರ್ಥಿಗಳು, ಗ್ರಾ.ಪಂ ಸದಸ್ಯರು, ಗ್ರಾಮಸ್ಥರು ಬೀಳ್ಕೊಡುಗೆ ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

**ಹೋಬಳಿ ವರದಿಗಾರರು : ಕೆ.ಎಸ್.ವೀರೇಶ್.ಕಾನಾ ಹೊಸಹಳ್ಳಿ**

## ವಿದ್ಯುತ್ ಕಳ್ಳತನ ಮಾಡುವುದು ಅಪರಾಧ: ಆರ್.ವಿ.ಕುಂಬಾರ



ಇಂಡಿ : ರಾತ್ರಿ ಸಮಯದಲ್ಲಿ ವಿದ್ಯುತ ಕಂಬಗಳ ಮೂಲಕ ನೇರವಾಗಿ ಕದ್ದು ವಾಯರ ಹುಕ್ಕು ಹಾಕಿ ವಿದ್ಯುತ ಕಳ್ಳತನ ಮಾಡುತ್ತಿರುವುದು ಮಹಾ ಅಪರಾಧವಾಗಿದೆ ಎಂದು ಹೆಸ್ಕಾಂ ಇಂಡಿ ಗ್ರಾಮಿಣ ಶಾಖೆಯ ಶಾಖಾಧಿಕಾರಿ ಆರ್.ವ್ಹಿ ಕುಂಬಾರ ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಅವರು ತಾಲೂಕಿನ ಭುಯ್ಯಾರ ಹಾಗು ಹಿರೇಬೆವನೂರ, ನೆಹರು ನಗರದಲ್ಲಿ ವಿದ್ಯುತ ಬಾಕಿ ವಸೂಲಿ ಹಾಗೂ ಅನಧಿಕೃತ ವಿದ್ಯುತ್ ಕಾರ್ಯಚರಣೆಯಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಳ್ಳತನದಿಂದಾಗಿ ವಿದ್ಯುತ್ ಪೋಲಾಗಿ ನಮ್ಮ ಇಲಾಖೆಗೆ ಹೆಚ್ಚಿನ ಹೊರೆ ಬಿಳ್ಳುತ್ತಿರುವುದರಿಂದ ವಿದ್ಯುತ ಕಳ್ಳತನ ಮಾಡಬಾರದು. ಒಂದು ವೇಳೆ ವಾಮ ಮಾರ್ಗದಿಂದ ವಿದ್ಯುತ ಬಳಕೆ ಮಾಡಿದರೆ ಸೂಕ್ತ ಕಾನೂನು ಕ್ರಮ ಕೈಗೊಂಡು ಭಾರಿ ದಂಡ ವಿಧಿಸಲಾಗುವುದು. ಆದ್ದರಿಂದ ದಯವಿಟ್ಟು ಯಾರು ವಿದ್ಯುತ ಕಳ್ಳತನ ಮಾಡಲು ಮುಂದಾಗ ಬಾರದು ಎಂದರು.

ಈ ವೇಳೆ ಅನಧಿಕೃತವಾಗಿ ಬಳಕೆ ಮಾಡುತ್ತಿದ್ದ ವಾಟರ್ ಹೀಟರ್ ಹಾಗೂ ವಾಯರ್ ವಶ ಪಡಿಸಿಕೊಂಡರು. ಇದರ ಜೊತೆಯಲ್ಲಿ ಗ್ರಾಮೀಣ ಭಾಗದ ಜನರಿಗೆ ವಿದ್ಯುತ್ ಬಳಕೆ ಕುರಿತು ಅರಿವು ಮೂಡಿಸಿದರು.

ಕಾರ್ಯಚರಣೆಯಲ್ಲಿ ಮಲ್ಲಿಕಾರ್ಜುನ ಮಾಶಾಳ, ಕಲ್ಲಪ್ಪ ಬಜಂತ್ರಿ, ಮಲ್ಲು ಬೆಳ್ಳಿಹಾಳ, ವಿಜಯ ಧನಗೊಂಡ, ವಿವೇಕ ಖೇಡಗಿ, ಸಲೀಂ ಕೊರಬು, ರಾಜಕುಮಾರ ವಾಲಿಕಾರ ಸೇರಿದಂತೆ ಅನೇಕ ಸಿಬ್ಬಂದಿ ವರ್ಗದವರು ಇದ್ದರು.

**ತಾಲೂಕ ವರದಿಗಾರರು:ಶಿವಪ್ಪ.ಬಿ.ಹರಿಜನ.ಇಂಡಿ**

# ಶಿರಸಂಗಿಯಲ್ಲಿ ವಿಶ್ವಕರ್ಮ ಪೂಜಾ ಮಹೋತ್ಸವ

## 10 ಹೋಮ ಕುಂಡದಲ್ಲಿ 25 ಜನ ವೃತ್ತಿಜರಿಂದ ಲೋಕಕಲ್ಯಾಣಾರ್ಥ ಯಶಸ್ವಿಯಾಗಿ ಜರುಗಿದ ಶ್ರೀ ಶತಚಂಡಿಕಾ ಮಹಾಯಾಗ





ಶಿರಸಂಗಿ: ವಿಶ್ವಕರ್ಮ ಪೂಜಾ ಮಹೋತ್ಸವ ಅಂಗವಾಗಿ ವಿಶ್ವಕರ್ಮರ ಶಕ್ತಿಪೀಠ ಶಿರಸಂಗಿಯ ಶ್ರೀ ಕಾಳಿಕಾದೇವಿ ಸನ್ನಿದಾನದಲ್ಲಿ ಶ್ರೀ ಶತಚಂಡಿಕಾ ಮಹಾಯಾಗ ಶೃದ್ಧಾಭಕ್ತಿಯಿಂದ ಯಶಸ್ವಿಯಾಗಿ ಜರುಗಿತು.

ವಿಶ್ವಕರ್ಮ ಪೂಜಾ ಮಹೋತ್ಸವದ ಏರಡನೆಯ ದಿನವಾದ ಸೋಮವಾರ ಬೇಳಗಿನ ಜಾವ ಶೃದ್ಧಾಭಕ್ತಿಯಿಂದ ವಿದ್ವಾನ ಶ್ರೀ ಟಿ.ವೀರರಾಘವ ಶರ್ಮಾ ಅವರ ಬ್ರಹ್ಮಸ್ಥಾನದಲ್ಲಿ ಬೆಂಗಳೂರಿನ ಚಂದ್ರೇಶ ಶರ್ಮಾ ಅವರ ಪ್ರಧಾನ ಪೌರೋಹಿತ್ಯದಲ್ಲಿ 25 ಜನರ ವೃತ್ತಿಜರಿಂದ 10 ಹೋಮ ಕುಂಡದಲ್ಲಿ ಸೋಮವಾರ ಲೋಕಕಲ್ಯಾಣಾರ್ಥ ಶೃದ್ಧಾಭಕ್ತಿಯಿಂದ ಯಶಸ್ವಿಯಾಗಿ ಶ್ರೀ ಶತ ಚಂಡಿಕಾ ಮಹಾಯಾಗ ಜರುಗಿತು,

ಶನಿವಾರ 9 ರಮದು ರಾತ್ರಿ ರಾಕ್ಷೋತ್ರ ಹೋಮ,ಅಘೋರ ಹೋಮ,ಮತ್ತು ಸುದರ್ಶನ ಹೋಮ, ದಿನಾಂಕ 10 ರಂದು ನವಗ್ರಹ ಹೋಮ, ಮಹಾಗಣಪತಿ ಹೋಮ,ವಾಸ್ತು ಹೋಮ, ರುದ್ರಹೋಮ, ದುರ್ಗಾ ಹೋಮ, ವಿಶ್ವಕರ್ಮ ಹೋಮ ನಡೆದವು, ಸೋಮವಾರ 100 ಬಾರಿ ದೇವಿ ಪಾರಾಯಾಣ,700 ಶ್ಲೋಕದೊಂದಿಗೆ 10 ಹೋಮ ಕುಂಡದಲ್ಲಿ ಶತ ಚಂಡಿಕಾ ಮಹಾಯಾಗ ಜರುಗಿತು,

ಮಹಾಯಾಗದಲ್ಲಿ ಯಾದಗಿರಿ ಏಕದಂಡಿಗಿ ಸರಸ್ವತಿ ಪೀಠದ ಪೂಜ್ಯರಾದ ಶ್ರೀನಿವಾಸ ಮಹಾಸ್ವಾಮಿಗಳು, ಚಿಕ್ಕುಂಬಿಯ ಅಭಿನವ ನಾಗಲಿಂಗ ಮಹಾಸ್ವಾಮಿಗಳು, ಕಕಮರಿಯ ಅಬಿನವ ಗುರುಲಿಂಗ ಸ್ವಾಮಿಗಳು, ಕಾಳಿಕಾದೇವಿ ದೇವಸ್ಥಾನದ ಅರ್ಚಕರು, ಸಂಸ್ಥೆಯ ಅಧ್ಯಕ್ಷ ಪದಾಧಿಕಾರಿಗಳು, 200 ಕ್ಕೂ ಹೆಚ್ಚು ದಂಪತಿಗಳು ಮಹಾಯಾಗದಲ್ಲಿ ಪಾಲ್ಗೋಂಡಿದ್ದರು.

ದಾರ್ಮಿಕ ಸಭೆ:

ನಂತರ ನಡೆದ ಧಾರ್ಮಿಕ ಸಭೆಯ ಹಾಗೂ ಭೂದಾನಿಗಳಿಗೆ ಸನ್ಮಾನ ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸಿ ಆಶಿರ್ವಚನ ನಿಡಿದ ಅವರು ಯಾದಗಿರಿ ಏಕದಂಡಿಗಿ ಸರಸ್ವತಿ ಪೀಠದ ಪೂಜ್ಯರಾದ ಶ್ರೀನಿವಾಸ ಮಹಾಸ್ವಾಮಿಗಳು ಲೋಕಕಲ್ಯಾಣಾರ್ಥ ನಡೆದ ಶ್ರೀ ಶತ ಚಂಡಿಕಾ ಮಹಾಯಾಗ ಇಡಿ ಕ್ಷೇತ್ರದ ಸರ್ವೊತೋಮುಖ ಬೇಳವಣಿಗೆಗೆ ಶಕ್ತಿ ನಿಡಲಿದ್ದು ಲೋಕದ ಜನರ ಸಂಕಷ್ಟಗಳನ್ನು ಪರಿಹರಿಸಲಿದೆ, ಯಜ್ಞಯಾಗಾಧಿಗಳಲ್ಲಿ ಸಾಧನೆ ಮಾಡಿದ ಸಾಕಷ್ಟು ಶ್ರೇಷ್ಠ ಪೌರೋಹಿತ್ಯರು ವಿಶ್ವಕರ್ಮರಲ್ಲಿದ್ದಾರೆ, ಇಂದಿನ ಮಹಾಯಾಗದ ದೇವಲೋಕವನ್ನೆ ದರೆಗೆ ಇಳಿಸಿದಂತಿತ್ತು, ವಿಶ್ವಕರ್ಮರು ಪತ್ತಾರಿಕೆ,ಬಡಿಗತನ, ಕಮ್ಮಾರಿಕೆ, ಶಿಲ್ಪಿ, ವೈದಿಕ ಹಿಗೆ ಪಂಚವೃತ್ತಿಗಳ ಮೂಲಕ ಜಗತ್ತಿಗೆ ಕಾಯಕ ಶ್ರಮ ಸಂಸ್ಕೃತಿಯನ್ನು ನಿಡಿದವರು, ಪ್ರಾಕೃತಿಕವಾಗಿ ಸಿಗುವ ವಸ್ತುಗಳನ್ನು ಸಾಮಾಜಿಕವಾಗಿ ಬದಲಾಯಿಸಿ ಜನರಿಗೆ ನೀಡುವ ಏಕೈಕ ಸಮುದಾಯವೆಂದರೆ ಅದು ವಿಶ್ವಕರ್ಮ ಸಮುದಾಯವಾಗಿದೆ ಎಂದರು.

ಸಾನಿದ್ಯ ವಹಸಿ ಆಶಿರ್ವಚನ ನೀಡಿದ ಚಿಕ್ಕುಂಬಿಯ ಅಭಿನವ ನಾಗಲಿಂಗಮಹಾಸ್ವಾಮಿಗಳು ವಿಶ್ವಕರ್ಮರ ಶಕ್ತಿ ಅಗಾದವಾಗಿದ್ದು, ಎಲ್ಲ ಸಮಾಜದ ಹಿತ ಬಯಸುವವರು ವಿಶ್ವಕರ್ಮರು, ಶ್ರೀ ಕ್ಷೇತ್ರದ ಅಬಿವೃದ್ಧಿಯ ಕನಸು ಕಂಡ ಸಂಸ್ಥೆಯ ಅಧ್ಯಕ್ಷ ಪಿ.ಬಿ.ಬಡಿಗೇರ ಅವರಿಗೆ ಎಲ್ಲರೂ ಕೈ ಜೋಡಿಸಿ ಎಂದರು.

ಯರಗಟ್ಟಿಯ ರಾಜರಾಜೇಶ್ವರಿ ಆಶ್ರಮದ ಗಣಪತಿ ಮಹಾರಾಜರು, ಶರಸಂಗಿಯ ತ್ಯಾಗವೀರ ಲಿಂಗರಾಜ ಸ್ಮಾರಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ವೀರಯ್ಯ ಅದೃಶಪ್ಪನ್ನವರ, ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆಯ ಅಧ್ಯಕ್ಷ ಪಿ.ಬಿ.ಬಡಿಗೇರ, ವಿಶ್ವಕರ್ಮ ಪ್ರತಿಷ್ಠಾನದ ಅಧ್ಯಕ್ಷ ಮೌನೇಶ್ವರ ಸುಳ್ಳದ, ಅಡಿಯಪ್ಪ ಬೇವೂರ,ಚಂದ್ರರಡ್ಡಿ ಹೂಲಿ, ಶ್ರರಣಗೌಡ ಪಾಟೀಲ ಸೇರಿಂದತೆ ಅನೇಕರು ಉಪಸ್ಥಿತರಿದ್ದರು.ಇದೆ ಸಂಧರ್ಭದಲ್ಲಿ ಭೂದಾನಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು. ಮಲ್ಲಿಕಾರ್ಜುನ ಪತ್ತಾರ ಕಾರ್ಯಕ್ರಮವನ್ನು ನೀರೂಪಿಸಿದರು.

ಜನರ ಮನಸೇಳೆದ ರಾಜ್ಯಮಟ್ಟದ ಕಲಾ ಪ್ರದರ್ಶನ: 2 ನೇ ದಿನವೂ ರಾಜ್ಯಮಟ್ಟದ ಪ್ರದರ್ಶನದಲ್ಲಿ ಛಾಯಾಚಿತ್ರ ಪ್ರದರ್ಶನ ಜನರ ಮನಸೇಳೆಯಿತು, ಪಾರಂಪರಿಕ ತಾಣಗಳು, ಗ್ರಾಮೀಣ ಸೊಗಡು, ಪ್ರಾಕೃತಿಕ ಛಾಯಾಚಿತ್ರಗಳು ನೋಡುಗರ ಗಮನ ಸೇಳೆದವು, ಇದರೊಂದಿಗೆ ಚಿತ್ರಕಲೆ, ಮಾರ್ಡನ ಆರ್ಟ,ಪಾರಂಪರಿಕ ಚಿತ್ರಕಲೆ, ಅಲ್ಲದೆ ಕಾಷ್ಟಶಿಲ್ಪ. ಲೋಹಶಿಲ್ಪ. ಶಿಲ್ಪಕಲೆಗಳು ಜನರನ್ನು ಅನುರಂಜಿಸಿದವು.

# ಕಣ್ಮನ ಸೂರ್ಯಗೊಂಡ ಮಹಿಳಾ ಆರ್.ಎಸ್.ಎಸ್. ಪಥಸಂಚಲನ

ಇಳಕಲ್: ಇದೇ ಪ್ರಥಮ ಬಾರಿಗೆ ಮಹಿಳಾ ಮಣಿಗಳೆಲ್ಲ ಕೂಡಿಕೊಂಡು ರಾಷ್ಟ್ರ ಸೇವಿಕಾ ಸಮಿತಿ ಇಳಕಲ್ ಘಟಕದಿಂದ ನಗರದಲ್ಲಿ ಪ್ರಥಮ ವಾರ್ಷಿಕೋತ್ಸವದ ಅಂಗವಾಗಿ ಆರ್. ಎಸ್. ಎಸ್. ಶಿಸ್ತು ಬದ್ಧ ಪತಸಂಚಲನದಲ್ಲಿ ಸುಮಾರು 250ಕ್ಕೂ ಹೆಚ್ಚು ಮಹಿಳೆಯರ ಹೆಜ್ಜೆಗಳ ಸದ್ದು ನೋಡುಗರ ಕಣ್ಮನ ಸೂರ್ಯಗೊಂಡವು.

ಪಥಸಂಚಲನದಲ್ಲಿ ನಗರ ಕಾರ್ಯವಾಹಿಕಾ ಭೀಮಾ ಮಹಾಂತೇಶ ಬಂಡಿ, ತೃಪ್ತಿ ಸಾಲಿಮಠ, ಸಹನಾ ಗಂಜಿ, ಡಾ.ಮಂಜುಳಾ ಸರಗಣಚಾರಿ, ಶರಣ್ಯ ಅಂಗಡಿ ಮೊದಲಾದವರನ್ನು ಒಳಗೊಂಡ ಪಥಸಂಚಲವು ಸರ್ಕಾರಿ ಆಸ್ಪತ್ರೆಯ ಹಳೆಯ ಕಟ್ಟಡದಲ್ಲಿರುವ ಶ್ರೀ ವೀರಾಂಜನೇಯ ದೇವಸ್ಥಾನದಿಂದ ಪ್ರಾರಂಭಗೊಂಡು ಮಹಿಳೆಯರು ಶ್ವೇತ ವಸ್ತ್ರದಾರಿಗಳಾಗಿ ಶಿಸ್ತಿನ ಸಿಪಾಯಿಯಂತೆ ಕಂಗೊಳಿಸುತ್ತಿದ್ದರು.

ಸಂಚಲನವು ಶ್ರೀ ನೀಲಕಂಠೇಶ್ವರ ಗುಡಿ, ಅಂಬಾಭವಾನಿ ಗುಡಿ, ರಾಮ ಮಂದಿರ, ಬಸವಣ್ಣ ದೇವರ ಗುಡಿ, ತುಳಸಿ ಆಸ್ಪತ್ರೆ, ಎಸ್. ಆರ್. ಕಂಠಿ ವೃತ್ತ, ಗ್ರಾಮ ಚೌಡಿ, ಗಾಂಧಿ ಚೌಕ್, ಶಂಕರಲಿಂಗ ಗುಡಿ, ಎ.ಸಿ.ಓ ಶಾಲೆ, ಶ್ರೀ ವಿಜಯ ಮಹಾಂತೇಶ ಕರ್ತೃ ಗದ್ದುಗೆ ಮುಂದೆ ಆಯ್ದು ಬಸವ ಪಬ್ಲಿಕ್ ಶಾಲೆಗೆ ಬಂದು ತಲುಪಿತು. ಪಥ ಸಂಚಲದ ಮುಂದುಗಡೆ ಬುಲೆಟ್ ಮೇಲೆ ತೃಪ್ತಿ ಸಾಲಿಮಠ ಎಲ್ಲರ ಗಮನ ಸೆಳೆದರು ಪಥಸಂಚಲಕ್ಕಾಗಿ ಮನೆಗಳ ಎದುರು ಬಣ್ಣ ಬಣ್ಣದ ರಂಗೋಲಿ ಹಾಕುವ ಮೂಲಕ ಜನರು ಅಭಿಮಾನವನ್ನು ವ್ಯಕ್ತಪಡಿಸಿದರು ದೇಶಭಕ್ತರು, ಸಂತರು, ಸ್ವಾತಂತ್ರ್ಯ ಯೋಧರ ವೇಶ ಧರಿಸಿದ್ದ ಚಿಣ್ಣರು ಅಲ್ಲಲ್ಲಿ ನಿಂತು ಪಥ ಸಂಚಲನಕ್ಕೆ ಆಕರ್ಷಣೆ ಹೆಚ್ಚಿಸಿದರು. ಯಾವುದೇ ಅಹಿತಕರ ಘಟನೆ ನಡೆಯದಂತೆ ಡಿ ವೈ ಎಸ್ ಪಿ ನೇತೃತ್ವದಲ್ಲಿ ಜಿಲ್ಲೆಯ ನೂರಾರು ಪೊಲೀಸರು ಹಾಗೂ ಮಹಿಳಾ ಪೊಲೀಸರು ಸೂಕ್ತ ಬಂದು ಬಸ್ತ ವ್ಯವಸ್ಥೆಯನ್ನು ಮಾಡಿದ್ದರು.

# ಢವಳೇಶ್ವರ ಪಿಕೆಪಿಎಸ್ ಚುನಾವಣೆ ಬಿಜೆಪಿ ಬೆಂಬಲಿತರ ಗೆಲುವು



ಮಹಾಲಿಂಗಪುರ: ಸಮೀಪದ ಢವಳೇಶ್ವರ ಪಿಕೆಪಿಎಸ್ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ 10 ಅಭ್ಯರ್ಥಿಗಳು, ಕಾಂಗ್ರೆಸ್ ಬೆಂಬಲಿತ ಇಬ್ಬರು ಅಭ್ಯರ್ಥಿಗಳು ಚುನಾಯಿತರಾಗಿದ್ದಾರೆ.

ಸಾಲಗಾರ ಸಾಮಾನ್ಯ ಕ್ಷೇತ್ರದಿಂದ ಮಹಾಲಿಂಗಪ್ಪ ಶಂಕರೆಪ್ಪ ಪಟ್ಟಣಶೆಟ್ಟಿ, ಅಶೋಕ ಗೋವಿಂದ ಹವಾಲ್ದಾರ, ಚಿದಾನಂದ ಈಶ್ವರ ಪಟ್ಟೇದ, ಸಹದೇವ ಮಲ್ಲಪ್ಪ ಪಣ್ಣಶೆಟ್ಟಿ, ವೀರೇಂದ್ರ ಮಹಾದೇವ ಮೇಟಿ, ಸಾಲಗಾರ ಹಿಂದುಳಿದ ವರ್ಗ ಅ ಕ್ಷೇತ್ರದಿಂದ ಸದಾಶಿವ ಲಕ್ಕಪ್ಪ ಹಣಗಂಡಿ, ಸಾಲಗಾರ ಹಿಂದುಳಿದ ವರ್ಗ ಬ ಕ್ಷೇತ್ರದಿಂದ ಸಂಗಮೇಶ ಅಪ್ಪಾಸಾಬ ನಾರಗೌಡ, ಸಾಲಗಾರ ಮಹಿಳಾ ಕ್ಷೇತ್ರದಿಂದ ಶ್ರೀಮತಿ ಈರವ್ವ ಅಲ್ಲಪ್ಪ ಸಂಗನ್ನವರ, ಶ್ರಿಮತಿ ಶೈಲಾ ಜಗದೀಶ ಪಟ್ಟಣಶೆಟ್ಟಿ, ಸಾಲಗಾರ ಪರಿಶೀಷ್ಟ ಪಂಗಡ ಕ್ಷೇತ್ರದಿಂದ ಮಾರುತಿ ಯಲ್ಲಪ್ಪ ಕಡಬಲ್ಲವರ, ಬಿನ್ನ ಸಾಲಗಾರ ಕ್ಷೇತ್ರದಿಂದ ಸಲೀಂಸಾಬ ಹಸನಸಾಬ ಮುಧೋಳ ಚುನಾಯಿತರಾಗಿದ್ದಾರೆ ಎಂದು ರಿಟರ್ನಿಂಗ್ ಆಫೀಸರ್ ಎಸ್.ಬಿ. ಮುಕಾರ್ತಿಹಾಳ ತಿಳಿಸಿದ್ದಾರೆ.

ಬಿಜೆಪಿ ಕಾರ್ಯಕರ್ತರ ವಿಜಯೋತ್ಸವ : ಪಿಕೆಪಿಎಸ್ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತ 10 ಅಭ್ಯರ್ಥಿಗಳು ಜಯಶಾಲಿಯಾದ್ದರಿಂದ ಗ್ರಾಮದ ಬಿಜೆಪಿ ಮುಖಂಡರು, ಕಾರ್ಯಕರ್ತರು, ಚುನಾಯಿತ ಸದಸ್ಯರೊಂದಿಗೆ ಕೆಸರಿಬಣ್ಣ ಎರಚಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

# ಸರ್ವೋಚ್ಛ ನ್ಯಾಯಾಲಯದ ತೀರ್ಪು ಸ್ವಾಗತಾರ್ಹ: ಸಂಸದ ಈರಣ್ಣ ಕಡಾಡಿ



ಮೂಡಲಗಿ : ಜಮ್ಮು-ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ ಸಂವಿಧಾನದ 370ನೇ ವಿಧಿ ರದ್ದುಗೊಳಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಸರ್ವೋಚ್ಛ ನ್ಯಾಯಾಲಯ ಪಂಚ ಸದಸ್ಯ ಸಾಂವಿಧಾನಿಕ ಪೀಠ ಎತ್ತಿ ಹಿಡಿಯುವ ಮೂಲಕ ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದು ಸಾಭಿತಾಗಿದೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಅವರು ಸುಪ್ರೀಂ ಕೋರ್ಟ್‌ನ ನೀಡಿರುವ ತೀರ್ಪುನ್ನು ಸ್ವಾಗತಿಸಿದ್ದಾರೆ.

ಸೋಮವಾರ ಪತ್ರಿಕಾ ಹೇಳಿಕೆ ನೀಡಿದ ಅವರು ದೇಶದ ಸಮಗ್ರತೆ, ಅಖಂಡತೆಗೆ ಧಕ್ಕೆಯಾಗಿದ್ದ 370-ವಿಶೇಷ ಸ್ಥಾನಮಾನ ರದ್ದು ಮಾಡಲು ಜನಸಂಘದ ನಾಯಕ ಶ್ರೀ ಶ್ಯಾಮಾ ಪ್ರಸಾದ್ ಮುಖರ್ಜಿಯವರು ಪ್ರಯತ್ನ ಆರಂಭಿಸಿದ್ದರು. 2019ರ ಆಗಸ್ಟ್ 6 ರಂದು ಸಂವಿಧಾನದ 370ನೇ ವಿಧಿಯನ್ನು ರದ್ದುಗೊಳಿಸಿದ ಕೇಂದ್ರ ಸರ್ಕಾರ ಲಡಾಖ್, ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶವನ್ನಾಗಿ ಮಾಡಿ.

ಶ್ಯಾಮಾ ಪ್ರಸಾದ್ ಮುಖರ್ಜಿಯವರ ಆ ಪ್ರಯತ್ನವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವರಾದ ಅಮಿತ ಶಾ ಸಾಕಾರಗೊಳಿಸಿದರು.

ಅಷ್ಟೇ ಅಲ್ಲದೇ 2024ರ ಸೆಪ್ಟೆಂಬರ್ 30ರ ಒಳಗಡೆ ವಿಧಾನಸಭಾ ಚುನಾವಣೆ ನಡೆಸಬೇಕೆಂದು ಚುನಾವಣಾ ಆಯೋಗಕ್ಕೆ ನ್ಯಾಯಾಲಯ ಸೂಚಿಸಿದೆ. ಜಮ್ಮು & ಕಾಶ್ಮೀರ, ಲಡಾಖ್‌ನ ಸರ್ವತೋಮುಖ ಅಭಿವೃದ್ಧಿ ಹಾಗೂ ಭಾರತದ ಏಕತೆಯ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ ತೀರ್ಮಾನ.

ಈ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವರಾದ ಅಮಿತ ಶಾ ಅವರಿಗೆ ಸಂಸದ ಈರಣ್ಣ ಕಡಾಡಿ ಅವರು ಹಾರ್ದಿಕ ಅಭಿನಂದನೆಗಳನ್ನು ತಿಳಿಸಿದ್ದಾರೆ.

# ಪತ್ರಿಕಾ ವಿತರಕ ರಾಮ ಕುಲಕರ್ಣಿಗೆ ಹೃದಯಸ್ಪರ್ಶಿ ಸನ್ಮಾನ 42 ವರ್ಷಗಳಿಂದ ಸೈಕಲ್ ಮೇಲೆ ಮನೆಮನೆಗೆ ಪತ್ರಿಕೆ ವಿತರಣೆ



ಅಥಣಿ : ಕಳೆದ 42 ವರ್ಷಗಳಿಂದ ಚಳಿ,ಮಳೆ, ಗಾಳಿ ಮತ್ತು ಬಿಸಿಲು ಲೆಕ್ಕಿಸದೆ ಅಥಣಿ ಪಟ್ಟಣದಲ್ಲಿ ಮನೆ ಮತ್ತು ಮನೆಗಳಿಗೆ ಕನ್ನಡ ದಿನ ಪತ್ರಿಕೆಗಳನ್ನ ವಿತರಿಸುವ ಮೂಲಕ ಕನ್ನಡ ಕಾಯಕವನ್ನೇ ಮಾಡಿದ ರಾಮ ಕುಲಕರ್ಣಿ ಅವರ ಕಾರ್ಯ ಮೆಚ್ಚುವಂತದ್ದು. ಪತ್ರಿಕೆಯ ವಿತರಕ ರಾಮ ಕುಲಕರ್ಣಿ ಅವರ ಕಾರ್ಯ ಶ್ಲಾಘನೀಯ ಎಂದು ಕರ್ನಾಟಕ ರಕ್ಷಣಾ ವೇದಿಕೆ ಶಿವರಾಮೇಗೌಡ ಬಣದ ಅಧ್ಯಕ್ಷ ಅಣ್ಣಾಸಾಬ ತೇಲಸಂಗ ಹೇಳಿದರು.

ಅವರು ಶುಕ್ರವಾರ ಇಲ್ಲಿನ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಾಲಯದಲ್ಲಿ ಇತ್ತೀಚಿಗೆ ಸೇವಾ ನಿವೃತ್ತಿ ಹೊಂದಿದ ಪತ್ರಿಕೆಯ ವಿತರಕ ರಾಮ ಕುಲಕರ್ಣಿ ಅವರಿಗೆ ಬೀಳ್ಕೊಡುಗೆ ಸನ್ಮಾನ ನೆರವೇರಿಸಿ ಮಾತನಾಡಿದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಅನೇಕ ಸವಾಲುಗಳನ್ನು ಎದುರಿಸಿ ಮನೆ ಮನೆಗೆ ಪತ್ರಿಕೆಗಳನ್ನ ಹಂಚುವುದು ಕೂಡ ಒಂದು ಸವಾಲಿನ ಕೆಲಸವಾಗಿದೆ. ನಸುಕಿನ ಜಾವಾ ಸೈಕಲ್ ಮೇಲೆ ಪತ್ರಿಕೆಗಳನ್ನ ತೆಗೆದುಕೊಂಡು ಓದುಗರ ಮನೆ ಮನೆಗೆ ವಿತರಿಸುವ ಕಾರ್ಯವನ್ನು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಮಾಡಿದ ರಾಮ ಕುಲಕರ್ಣಿ ಅವರ ಕಾರ್ಯ ಮೆಚ್ಚುವಂತಹದ್ದು, ಅವರ ನಿವೃತ್ತಿಯ ಜೀವನ ಸುಖಕರವಾಗಿರಲೆಂದು ಶುಭಕೋರಿದರು.

ಈ ಸಂದರ್ಭದಲ್ಲಿ ಸನ್ಮಾನ ಸ್ವೀಕರಿಸಿದ ರಾಮ ಕುಲಕರ್ಣಿ ಮಾತನಾಡಿ ನಾನು 16 ವಯಸ್ಸಿನ ಯುವಕನಿದ್ದಾಗಿನಿಂದ ಪತ್ರಿಕೆಗಳನ್ನು ವಿತರಿಸುತ್ತಿದ್ದೇನೆ. ಅತ್ಯಂತ ಬಡ ಕುಟುಂಬದಲ್ಲಿ ಹುಟ್ಟಿದ ನಾನು ಅನೇಕ ಸಂಕಷ್ಟ ಮತ್ತು ಸವಾಲುಗಳನ್ನು ಎದುರಿಸಿ ದಿನಪತ್ರಿಕೆಗಳನ್ನ ಮನೆಮನೆಗಳಿಗೆ ವಿತರಿಸುವ ಮೂಲಕ ನನ್ನ ಬದುಕು ಕಟ್ಟಿಕೊಂಡು ಕುಟುಂಬ ನಿರ್ವಹಣೆ ಮಾಡಿದ್ದೇನೆ. ಇಂತಹ ಬಡತನ ಪರಿಸ್ಥಿತಿಯಲ್ಲಿ ನನ್ನ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದ್ದೇನೆ. ಅವರು ಕೂಡ ಉತ್ತಮ ಜೀವನ ಕಟ್ಟಿಕೊಂಡಿದ್ದಾರೆ. ನನಗೆ ಇತ್ತೀಚಿನ ದಿನಗಳಲ್ಲಿ ಆರೋಗ್ಯದಲ್ಲಿ ಸಮಸ್ಯೆಯಾಗುತ್ತಿದ್ದು, ಆದ್ದರಿಂದ ಮನೆ ಮನೆಗೆ ಪತ್ರಿಕೆಗಳನ್ನ ವಿತರಿಸುವ ಕಾರ್ಯದಿಂದ ನಿವೃತ್ತಿ ಬಯಸಿದ್ದೇನೆ. ಇಲ್ಲಿಯವರೆಗೆ ನನಗೆ ಸಹಕಾರ ನೀಡಿದ ಎಲ್ಲ ಪತ್ರಿಕಾ ಓದುಗರಿಗೆ, ಪತ್ರಕರ್ತರಿಗೆ, ನನ್ನ ಕಾಯಕವನ್ನ ಗುರುತಿಸಿ ಸನ್ಮಾನಿಸಿದ ವಿವಿಧ ಸಂಘ ಸಂಸ್ಥೆಗಳಿಗೆ ಮತ್ತು ಕನ್ನಡಪರ ಸಂಘಟನೆಗಳಿಗೆ ಧನ್ಯವಾದಗಳು ಸಲ್ಲಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ದಲಿತ ಮುಖಂಡ ರವಿ ಕಾಂಬಳೆ, ಜಲಯೋಗ ಸಾಧಕ ವಿಲಾಸ್ ರಾವ್ ಕುಲಕರ್ಣಿ, ಪತ್ರಕರ್ತರಾದ ಪರಶುರಾಮ ನಂದೇಶ್ವರ, ರಮೇಶ ಬಾದವಾಡಗಿ, ಜಬ್ಬಾರ ಚಿಂಚಲಿ, ರಾಕೇಶ ಮೈಗೂರ, ಶಿವಾನಂದ ಪೂಜಾರಿ, ಯಾಸೀನ್ ಝಾರೆ, ಉದಯ ಮಾಕಾಣಿ, ರಾಜು ವಾಘಮೋರೆ, ಅಮೀರ್ ಜಮಖಂಡಿ, ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ತೇರದಾಳದಲ್ಲಿ ಕನಕದಾಸ ಜಯಂತಿ ಆಚರಣೆ

## ಸಮಾಜಕ್ಕೆ ಕೊಡುಗೆ ನೀಡುವ ಸಂಕಲ್ಪ ಮಾಡಿ: ಚಿನ್ಮಯಾನಂದ ಶ್ರೀ



ತೇರದಾಳ : ಯುವಕರು ಸಮಾಜ ಏಳಿಗೆಯ ಶಕ್ತಿ. ಆದ್ದರಿಂದ ಸಮಾಜಕ್ಕೆ ಕೊಡುಗೆ ನೀಡುವ ಸಂಕಲ್ಪ ಮಾಡುವ ಮೂಲಕ ಸಮಾಜದ ಋಣ ತೀರಿಸುವ ಕೆಲಸ ಮಾಡಬೇಕೆಂದು ಮುಗಳಖೋಡ-ಶಿರೂರ ಕನಕಬ್ರಹ್ಮ ಮಠದ ಚಿನ್ಮಯಾನಂದ ಶ್ರೀ ಹೇಳಿದರು.

ಇಲ್ಲಿನ ಕುರುಬ ಸಮಾಜದವರು ಹಮ್ಮಿಕೊಂಡಿದ್ದ ಕನಕದಾಸ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಇತ್ತಿಚಿನ ದಿನಗಳಲ್ಲಿ ಯುವಕರು ದುಶ್ಚಟಗಳಿಗೆ ಹೆಚ್ಚು ಅಂಟಿಕೊಳ್ಳುತ್ತಿದ್ದಾರೆ. ಇದಕ್ಕೆ ಹಿರಿಯರು ಕಡಿವಾಣ ಹಾಕುವುದರ ಜತೆಗೆ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕೆಂದು ಹೇಳಿದರು. ಸಮಾಜದ ಜಿಲ್ಲಾಧ್ಯಕ್ಷ ಡಿ.ಬಿ. ಸಿದ್ದಾಪುರ, ಕುರುಬ ಸಮಾಜ ಇನ್ನೂ ಸಾಕಷ್ಟು ಸಂಘಟನೆ ಆಗುವ ಅವಶ್ಯಕತೆ ಇದೆ. ಆ ದಿಸೆಯಲ್ಲಿ ಸಮಾಜ ಬಾಂಧವರು ಸಂಘಟನೆಗೆ ಆದ್ಯತೆ ನೀಡಬೇಕು. ಹಾಗೂ ಸಮಾಜದ ಒಳಿತಿಗಾಗಿ ಶ್ರಮಿಸಬೇಕೆಂದು ಕರೆ ನೀಡಿದರು. ಡಾ. ಡಿ.ಎನ್ ಸನದಿ, ಪಿಎಸ್ಐ ಅಪ್ಪು ಐಗಳಿ ಮಾತನಾಡಿದರು. ಜಮಖಂಡಿ ಬಿಎಲ್‌ಡಿಇ ಕಾಲೇಜಿನ ಉಪನ್ಯಾಸಕ ಮಹಾದೇವ ಪೂಜಾರಿ ವಿಶೇಷ ಉಪನ್ಯಾಸ ನೀಡಿದರು. ಹಂದಿಗುಂದ ಹಾಲಸಿದ್ದೇಶ್ವರ ಮಠದ ಸದ್ಗುರು ಶ್ರೀಮಂತ ಶಿವಯೋಗಿ ನೇತೃತ್ವ ವಹಿಸಿದ್ದರು. ಸಮಾಜದ ತಾಲೂಕು ಅಧ್ಯಕ್ಷ ಸಿದ್ರಾಮ ಕಾಗಿ ಅಧ್ಯಕ್ಷತೆ ವಹಿಸಿದ್ದರು. ಪ್ರಮೀಣ ನಾಡಗೌಡ, ರಂಗನೌಡ ಪಾಟೀಲ, ಲಕ್ಕಪ್ಪ ಬನಾಜನವರ, ಮಲಕಾರಿ ಗಾಡದವರ, ಮಹಾಲಿಂಗಪ್ಪ ಜಕ್ಕನ್ನವರ, ಮಲ್ಲಪ್ಪ ಸಿಂಗಾಡಿ, ದುಂಡಪ್ಪ ಕರಿಗಾರ, ಶೆಟ್ಟೆಪ್ಪ ಸುಣಗಾರ, ಡಾ. ಎಸ್.ಎಂ. ಕರಿಗಾರ, ಡಾ. ಕೆ.ವೈ. ಕೆಂಬಾಗಿ ಮತ್ತಿತರಿದ್ದರು. ಅಶೋಕ ಧರ್ಮಟ್ಟಿ ಈರಣ್ಣ ಲಟ್ಟಿ ಕಾರ್ಯಕ್ರಮ ನಿರ್ವಹಿಸಿದರು.

ಭವ್ಯ ಮೆರವಣಿಗೆ-ಇದಕ್ಕೂ ಮೊದಲು ಕಲಟ್ಟಿ ಗಲ್ಲಿಯಿಂದ ಕನಕದಾಸರ ಭಾವಚಿತ್ರ, ಕುಂಭಮೇಳದ ಭವ್ಯ ಮೆರವಣಿಗೆ ಪ್ರಮುಖ ಬೀದಿಗಳಲ್ಲಿ ಜರುಗಿತು. ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಹಲವು ಡೊಳ್ಳು ಬಾರಿಸುವ ಸಂಘಗಳು ಮೆರವಣಿಗೆಗೆ ಕಳೆಕಟ್ಟಿ ಭಂಡಾರದಲ್ಲಿ ಮಿಂದೆದ್ದರು.

# ಸಸಾಲಟ್ಟಿ ಪಿಕೆಪಿಎಸ್ ಮತ್ತೆ ಬಿಜೆಪಿ ತೆಕ್ಕೆಗೆ



ತೇರದಾಳ : ಸಂಸ್ಥೆ ಪ್ರಾರಂಭಗೊಂಡಾಗಿನಿಂದ ಎರಡನೇ ಬಾರಿ ಚುನಾವಣೆ ಎದುರಿಸಿದ ಸಸಾಲಟ್ಟಿ ಪಿಕೆಪಿಎಸ್ ಬ್ಯಾಂಕಿನ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲುವಿನ ನಗೆ ಬೀರುವ ಮೂಲಕ ಮತ್ತೆ ಬಿಜೆಪಿ ತನ್ನ ತೆಕ್ಕೆಗೆ ವಶಪಡಿಸಿಕೊಂಡಿದೆ.

12 ಸಂಖ್ಯಾಬಲ ಹೊಂದಿರುವ ಪಿಕೆಪಿಎಸ್, ಸಸಾಲಟ್ಟಿ ಗ್ರಾಮದಲ್ಲಿ ಎಸ್ಟಿ ಸಮುದಾಯ ಇಲ್ಲದ ಕಾರಣ 11 ಸ್ಥಾನಗಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ 10 ಬಿಜೆಪಿ ಬೆಂಬಲಿತ ಹಾಗೂ ಓರ್ವ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಜಯ ಹೊಂದಿದ್ದಾರೆ.

ಸಾಲಗಾರ ಕ್ಷೇತ್ರದಿಂದ ಬನಪ್ಪ ಮೂರಾಬಟ್ಟಿ(381), ಗುರುಬಸು ಹುಕ್ಕೇರಿ(420), ರಾಜು ಉಳ್ಳಾಗಡ್ಡಿ(314), ಮಹಾದೇವ ಮಾಲಗಾಂವಿ(404) ಹಾಗೂ ಈರಪ್ಪ ಮಳನ್ನವರ((495) ಆಯ್ಕೆಗೊಂಡಿದ್ದಾರೆ. ಹಿಂದುಳಿದ ಬ ವರ್ಗದಿಂದ ರವಿ ರಾಮಪ್ಪ ಮರಡಿ(528) ಹಿಂದುಳಿದ ಅ ವರ್ಗದಿಂದ ಸತ್ಯಪ್ಪ ಕೊಪ್ಪದ(403), ಮಹಿಳಾ ಕ್ಷೇತ್ರದಿಂದ ಮಹಾದೇವಿ ಪ್ರಕಾಶ ಭದ್ರಶೆಟ್ಟಿ((461), ಮಹಾದೇವಿ ಪರಮನಾಣೆಪ್ಪ ಕಾಪಶಿ(476), ಎಸ್ಸಿ ಕ್ಷೇತ್ರದಿಂದ ಭೀಮಪ್ಪ ಕಾಖಂಡಕಿ(467) ಹಾಗೂ ಬಿನ್ ಸಾಲಗಾರ ಕ್ಷೇತ್ರದಿಂದ ರಾಜು ಅಶೋಕ ಪಾಟೀಲ((68) ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದ್ದಾರೆ. ಕಾಂಗ್ರೆಸ್ ಬಿಜೆಪಿ ನಡುವೆ ತೀವ್ರ ಜಿದ್ದಾಜಿದ್ದಿಯಿಂದ ಚುನಾವಣೆ ನಡೆದಿದ್ದು,

ಮತದಾರ ಬಿಜೆಪಿ ಅಭ್ಯರ್ಥಿಗಳಿಗೆ ಜೈ ಎಂದಿದ್ದಾನೆ. 1071 ಸಾಲಗಾರ ಮತದಾರ ಪೈಕಿ 1026 ಹಾಗೂ 119 ಬಿನ್ ಸಾಲಗಾರ ಮತದಾರ ಪೈಕಿ 109 ಮತದಾರರು ತಮ್ಮ ಹಕ್ಕು ಚಲಾಯಿಸಿದರು. ವಿ.ಎಸ್. ಮಾನೆ ಚುನಾವಣಾಧಿಕಾರಿಯಾಗಿ ಹಾಗೂ ಮುತ್ತು ಹಿರೇಮಠ ಸಹಾಯಕರಾಗಿ ಕಾರ್ಯ ನಿರ್ವಹಿಸಿದರು.

# ದೇವರ ನಾಮಸ್ಮರಣೆಯಿಂದ ಮಾನಸಿಕ ನೆಮ್ಮದಿ: ಚಿನ್ಮಯಾನಂದ ಸ್ವಾಮೀಜಿ

ಮಹಾಲಿಂಗಪುರ : ನಿರ್ಮಲ ಮನಸ್ಸಿನ ಭಕ್ತಿಯಿಂದ ದೇವರ ನಾಮ ಸ್ಮರಣೆ ಮಾಡಿ ದೇವರನ್ನು ಒಲಿಸಿಕೊಳ್ಳುತ್ತಾರೋ ಅವರಿಗೆ ಪುಣ್ಯ ಪ್ರಾಪ್ತಿಯಾಗಿ ದೇವರು ಒಲಿಯುತ್ತಾನೆ ಎಂದು ಗಣಿ ಸಿದ್ದರೂಢ ಮಠದ ಚಿನ್ಮಯಾನಂದ ಸ್ವಾಮೀಜಿ ಹೇಳಿದರು.

ಪಟ್ಟಣದ ಕರಿಸಿದ್ದೇಶ್ವರ ದೇವಸ್ಥಾನದಲ್ಲಿ ನಡೆದ ಕಾರ್ತಿಕ ಮಾಸದ ಮಾಲೆ ಇಳಿಸುವ ಕಾರ್ಯಕ್ರಮದ ದಿವ್ಯ ಸಾನಿಧ್ಯವಹಿಸಿ ಮಾತನಾಡಿ ಬಂದಿದೆಲ್ಲಾ ಬರಲಿ ಭಗವಂತನ ದಯೆ ಒಂದೇ ಇರಲಿ ಎನ್ನುವ ನಾನ್ನುಡಿಯಂತೆ ದೇವರ ನಾಮ ಬಲದಿಂದ ಎಲ್ಲವನ್ನು ಗೆಲ್ಲಬಹುದು ಎಂದರು.

ಕಂಕನವಾಡಿಯ ಮಾರುತಿ ಶರಣರು ಮಾತನಾಡಿ ಇಂದಿನ ಜಗತ್ತಿನಲ್ಲಿ ದುಡ್ಡಿಗೆ ಬೆಲೆ ಹೆಚ್ಚು, ಯುವ ಜನಾಂಗದ ಅದರ ಬೆನ್ನು ಹತ್ತಿ ದುಶ್ಚಟಗಳಿಗೆ ದಾಸರಾಗುತ್ತಿದ್ದು. ಆದ್ದರಿಂದ ಇಂತಹ ಅಧ್ಯಾತ್ಮ ಕಾರ್ಯಕ್ರಮಗಳತ್ತ ಯುವಕರು ಒಲವು ತೋರಬೇಕು ಅದಕ್ಕಾಗಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಅದರ ಹೆಚ್ಚಿನ ಲಾಭ ಪಡೆದುಕೊಳ್ಳಬೇಕು. ಅಧ್ಯಾತ್ಮ ಕಾರ್ಯಕ್ರಮಗಳಿಗೆ ಸಹಾಯ ಸಹಕಾರ



ಬಹಳ ಮುಖ್ಯ ಎಂದರು.

ಪತ್ರಕರ್ತರಾದ ಜಯರಾಮ ಶೆಟ್ಟಿ, ಡಾ.ಸಂಗಮೇಶ ಹಿಡಕಲ್ಲ, ಸಿನಿಮಾ ಸಹನಟ ದಾನಪ್ಪ ಮೂಡಲಗಿ ಮಾತನಾಡಿದರು. ಇದೆ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಮಹಣಿಯರನ್ನು ಸನ್ಮಾನಿಸಲಾಯಿತು.

ಮಹಾಲಿಂಗಪ್ಪ ಜಕ್ಕನ್ನವರ ಅಧ್ಯಕ್ಷತೆವಹಿಸಿದ್ದರು. ಗಂಗಾಧರ ಮೇಟಿ, ಮಹೇಶ್ ಇಟಕನ್ನವರ, ಮಹಾಲಿಂಗಪ್ಪ ಕಳ್ಯಾಗೋಳ, ಮಹೇಶ್ ಆರಿ, ಚಂದ್ರಪ್ಪ ದೋಣಿ, ಚನ್ನಬಸು ಹುರಕಡ್ಲಿ, ರಾಜೇಂದ್ರ ಪಾಟೀಲ, ಚಂದ್ರಶೇಖರ ಮೋರೆ ಅತಿಥಿಗಳಾಗಿ ಭಾಗವಹಿಸಿದ್ದರು.

ಹಾಲುಮತ ಸಮಾಜದ ಹಿರಿಯರಾದ ಲಕ್ಷ್ಮಣ ಕಿಶೋರ, ರಾಮಣ್ಣ ಬಂಡಿ, ಮಲ್ಲಪ್ಪಾ ಸಿಂಗಾಡಿ, ಹಣಮಂತ ಅವಟಗಿ, ಪರಸಪ್ಪ ಬಂಡಿ, ಯಲ್ಲಪ್ಪ ಪಟ್ಟಣಕೋಡಿ, ರಾಜು ದೋಣಿ, ನಾಗಪ್ಪ ದೋಣಿ, ಸಂಗಪ್ಪ ದೋಣಿ, ಶಿವಾನಂದ ಕನ್ನಾಳ, ಶ್ರೀಶೈಲ ಅವಟಿ, ಮುತ್ತು ದಿವಾನ, ಮುತ್ತು ಸಾಲಿಮನಿ, ಹಣಮಂತ ವಗ್ಗರ, ಆನಂದ ಬಂಡಿ, ಕರೆಪ್ಪ ಬಂಡಿ, ಈರಪ್ಪ ಜಕ್ಕಣ್ಣವರ, ಜೇಟ್ಟೆಪ್ಪ ಜಕ್ಕಣ್ಣವರ, ಕರೆಪ್ಪ ಪೂಜಾರಿ, ಮಲ್ಲಿಕಾರ್ಜುನ ಬನಹಟ್ಟಿ, ವಿಠಲ ರಾ.ಸಂಶಿ, ರಾಮಣ್ಣ ಹುಣಶೀಕಟ್ಟಿ, ಶಿವಲಿಂಗಪ್ಪ ಜಕ್ಕಣ್ಣವರ, ಮಾರುತಿ ದಳವಾಯಿ, ಕರೆಪ್ಪ ಅವಟಿ, ಜಗದೀಶ ಜಕ್ಕಣ್ಣವರ, ಮಹಾಲಿಂಗಪ್ಪ ಕಾರಜೋಳ, ಶಶಿಧರ ಜಕ್ಕಣ್ಣವರ, ಮಹಾಲಿಂಗಪ್ಪ ಅವಟಿ, ಅರ್ಜುನ್ ಮೇಟಿ ಕರೆಪ್ಪ ಮೇಟಿ, ಬಸು ಮೇಟಿ ಸೇರಿದಂತೆ ಹಲವರು ಇದ್ದರು.

## ಉಪಚುನಾವಣೆ: ಮೊದಲ ದಿನ ಯಾವುದೇ ನಾಮಪತ್ರ ಸಲ್ಲಿಕೆ ಇಲ್ಲ

ಮಹಾಲಿಂಗಪುರ : ಇದೇ ಡಿ.27ರಂದು ನಡೆಯಲಿರುವ ಮಹಾಲಿಂಗಪುರ ಸಭೆಯ 14ನೇ ವಾರ್ಡ ಮತ್ತು ರನ್ನಬೆಳಗಲಿ ಪಪಂ 6ನೇ ವಾರ್ಡಿನ ಉಪಚುನಾವಣಾ ಪ್ರಕ್ರಿಯೆ ಪ್ರಾರಂಭವಾಗಿದ್ದು, ನಾಮಪತ್ರ ಸಲ್ಲಿಕೆ ಪ್ರಾರಂಭವಾದ ಡಿ.11ರ ಸೋಮವಾರ ಮೊದಲ ದಿನ ಯಾವುದೇ ನಾಮಪತ್ರಗಳು ಸಲ್ಲಿಕೆಯಾಗಿಲ್ಲ.ಡಿ.15 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ ಎಂದು ಮಹಾಲಿಂಗಪುರ ಪುರಸಭೆ ಚುನಾವಣಾಧಿಕಾರಿ ವ್ಹಿ.ಸಿ.ಬೆಳಗಲ್ ಮತ್ತು ರನ್ನಬೆಳಗಲಿ ಪಟ್ಟಣ ಪಂಚಾಯತಿ ಚುನಾವಣಾಧಿಕಾರಿ ಶಂಕರ ಸುತಾರ ತಿಳಿಸಿದ್ದಾರೆ.

## ಕೇಂದ್ರ ಸರಕಾರ ಅನುದಾನ ಬಿಡುಗಡೆ ಮಾಡುವಲ್ಲಿ ತಾರತಮ್ಯ: ಮಹೇಶ ಹೊಸಗೌಡ್ರ ಆರೋಪ

ಬಾದಾಮಿ : ರಾಜ್ಯದಲ್ಲಿ ಭೀಕರ ಬರಗಾಲ ಇದ್ದರೂ ಕೇಂದ್ರ ಸರಕಾರ ಬರಗಾಲ ಕಾಮಗಾರಿಗೆ, ರೈತರಿಗೆ ಪರಿಹಾರ ನೀಡುತ್ತಿಲ್ಲ. ಕೇಂದ್ರ ಸರಕಾರ ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಪ್ರಧಾನ ಕಾರ್ಯದರ್ಶಿ ಮಹೇಶ ಹೊಸಗೌಡ್ರ ಆರೋಪಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು ರಾಜ್ಯದಲ್ಲಿ ಸುಮಾರು 200 ಕ್ಕೂ ತಾಲೂಕುಗಳಲ್ಲಿ ಭೀಕರ ಬರಗಾಲ ಉಂಟಾಗಿದೆ. ಕೇಂದ್ರ ಅಧ್ಯಯನ ತಂಡ ಬಂದು ಹೋಗಿ ವರದಿ ಕೇಂದ್ರ ಸರಕಾರದ ಕೈ ಸೇರಿದೆ. ಆದರೆ ಕೇಂದ್ರ ಸರಕಾರ ಮಾತ್ರ ರಾಜ್ಯಕ್ಕೆ ಅನುದಾನ ನೀಡುತ್ತಿಲ್ಲ. ರಾಜ್ಯದಿಂದ 25 ಸಂಸದರು ಆಯ್ಕೆಯಾಗಿದ್ದು, ಒಬ್ಬರು ಬಾಯಿ ಬಿಡುತ್ತಿಲ್ಲ. ಕೂಡಲೇ ಕೇಂದ್ರ ಸರಕಾರ ತನ್ನ ಪಾಲಿನ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಮಹೇಶ ಹೊಸಗೌಡ್ರ ಕೇಂದ್ರ ಸರಕಾರವನ್ನು ಆಗ್ರಹಿಸಿದ್ದಾರೆ.

## ರಾಷ್ಟ್ರಮಟ್ಟದ ಯೋಗಾಸನ ಕ್ರೀಡಾಕೂಟಕ್ಕೆ ಪ್ರತಿಭಾ ಗೌಡ್ರ ಆಯ್ಕೆ



ಬಾದಾಮಿ : ಪಟ್ಟಣದ ಎಸ್.ಬಿ. ಮಮದಾಪೂರ ಕಲಾ ವಾಣಿಜ್ಯ ವಿಜ್ಞಾನ ಮಹಾವಿದ್ಯಾ ಲಯದ ವಿಜ್ಞಾನ ವಿಭಾಗದ ವಿ ದ್ಯಾರ್ಥಿನಿ, ತಾಲ್ಲೂಕಿನ ನೆಲವಿಗಿ ಗ್ರಾಮದ ಪ್ರತಿಭಾ ಚಂದ್ರಗೌಡ ಗೌಡ್ರ ಇವರು ರಾಷ್ಟ್ರಮಟ್ಟದ ಯೋಗಾಸನ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾಳೆ.

ಶಿಕ್ಷಕ ದಂಪತಿಗಳಾದ ಚಂದ್ರಗೌಡ ಗೌಡ್ರ ಹಾಗೂ ಶ್ರೀಮತಿ ಉಮಾ ಹುಲ್ಲಿಕೇರಿ ಇವರಗಳ ಸುಪುತ್ರಿಯಾಗಿರುವ ವಿದ್ಯಾರ್ಥಿನಿ ಪ್ರತಿಭಾ ಗೌಡ್ರ ರಾಣಿ ಚನ್ನಮ್ಮ ವಿಶ್ವವಿದ್ಯಾಲ ಯದ ಯೋಗಾಸನ ಕ್ರೀಡಾಕೂ ಟದ ಪ್ರತಿನಿಧಿಯಾಗಿ ಆಯ್ಕೆ ಯಾಗಿ ತಮಿಳುನಾಡಿನ ಅಣ್ಣಾ ವಿಶ್ವವಿದ್ಯಾಲಯದಲ್ಲಿ ಜರುಗಿದ ಯೋಗಾಸನ ಕ್ರೀಡೆಯಲ್ಲಿ ಅತ್ಯದ್ಭುತವಾದ ಪ್ರದರ್ಶನವನ್ನು ನೀಡುವದರ ಮೂಲಕ ಕರ್ನಾ ಟಕ ರಾಜ್ಯದ ಪ್ರತಿನಿಧಿಯಾಗಿ ಓಡಿಸ್ಸಾ ರಾಜ್ಯದ ಭುವನೇಶ್ವರಿಯಲ್ಲಿ ಜರುಗುವ ರಾಷ್ಟ್ರಮಟ್ಟದ ಯೋಗಾಸನ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾಳೆ.

ಅಭಿನಂದನೆ; ಅದ್ಭುತವಾದ ಪ್ರತಿಭೆಯನ್ನು ಪ್ರದರ್ಶನ ಮಾಡಿರುವ ಪ್ರತಿಭಾ ಗೌಡ್ರ ಇವರನ್ನು ಕಾಲೇಜಿನ ಪ್ರಾಚಾರ್ಯ ರವೀಂದ್ರ ಮೂಲಿಮನಿ, ಉಪನ್ಯಾಸಕರು, ಪಾಲಕರು, ನೆಲವಿಗಿ ಗ್ರಾಮದ ಗ್ರಾ.ಪಂ.ಸದಸ್ಯ ಮಲ್ಲಪ್ಪ ಗಾರವಾಡ ಸೇರಿದಂತೆ ಹಿರಿಯರು, ಕುಟುಂಬ ವರ್ಗದವರು ಅಭಿನಂದಿಸಿದ್ದಾರೆ.

## ವ್ಯಕ್ತಿತ್ವ ವಿಕಸನ ಸಂವಹನ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಪ್ರಯತ್ನಿಸಿಬೇಕು ನಿವೃತ್ತ ಪ್ರಾಧ್ಯಾಪಕ ಹಾವನ್ನವರ



ಮೂಡಲಗಿ : ವಿದ್ಯಾರ್ಥಿಗಳು ವ್ಯಕ್ತಿತ್ವ ವಿಕಸನ ಸಂವಹನ ಕೌಶಲ್ಯಗಳನ್ನು ಬೆಳಸಿಕೊಳ್ಳಲು ಪ್ರಯತ್ನಿಸಬೇಕು ಇಂದಿನ ದಿನಗಳಲ್ಲಿ ಮೊಬೈಲ್ ತಾಂತ್ರಿಕ ಸಾಧನವಾಗಿ ನಮ್ಮನ್ನು ಆಕ್ರಮಿಸಿಕೊಂಡಿದ್ದೆ ಎಂದು ಗೋಕಾಕದ ಜೆ.ಎಸ್.ಎಸ್. ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಎಸ್.ಬಿ.ಹಾವನ್ನವರ ಹೇಳಿದರು.

ಅವರು ಸ್ಥಳೀಯ ಆರ್‌ಡಿಎಸ್ ಕಲಾ, ವಾಣಿಜ್ಯ, ವಿಜ್ಞಾನ ಮತ್ತು ಸಮಾಜಕಾರ್ಯ ಪದವಿ ಮಹಾವಿದ್ಯಾಲಯದಲ್ಲಿ ಎನ್.ಎಸ್.ಎಸ್ ಘಟಕ, ಸ್ಕೌಟ್ಸ್ & ಗೈಡ್ಸ್ ಘಟಕ, ಸಾಂಸ್ಕೃತಿಕ ಹಾಗೂ ಕ್ರೀಡೆ, ಪಠ್ಯೇತರ ಚಟುವಟಿಕೆಗಳು ಉದ್ಘಾಟನೆ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ವಿದ್ಯಾರ್ಥಿಗಳು ನಮ್ಮ ಪ್ರತಿಭೆಗಳು ಹೊರಜಗತ್ತಿಗೆ ಪರಿಚಯವಾಗಲು ವಿಶೇಷ ವ್ಯಕ್ತಿತ್ವದ ತತ್ವಗಳನ್ನು ಮತ್ತು ವ್ಯವಹಾರಿಕ ಕೌಶಲ್ಯಗಳನ್ನು ವಿದ್ಯಾರ್ಥಿಗಳು ಓದಿನ ಜೊತೆಗೆ ಬೆಳಸಿಕೊಳ್ಳಬೇಕು ಕೇವಲ ನಾಲ್ಕು ಗೋಡೆಯ ಒಳಗೆ ನಮ್ಮ ಬದುಕು ಇರಬಾರದು ಅದು ಪ್ರಪಂಚಕ್ಕೆ ತೋರುವಂತಹ ಸಾಮಾಜಿಕ ಜೀವಿಯಾಗಿ ಸಾಧಕರ ಸಾಲಿನಲ್ಲಿ ನಮ್ಮ ಜೀವನ ರೂಪಗೊಳ್ಳುವಂತೆ ವಿದ್ಯಾರ್ಥಿಗಳು ಪ್ರಯತ್ನಿಸಬೇಕೆಂದು

ಕಾಲೇಜು ಪ್ರಾಚಾರ್ಯ ಸತೀಶ ಗೋಟೂರೆ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಜೀವನ ರೂಪಿಸಿಕೊಳ್ಳಲು ಮಹತ್ವದ ಕನಸ್ಸುಗಳನ್ನು ಹೊಂದಿದ್ದು ಅವುಗಳನ್ನು ರೂಪಿಸಿಕೊಳ್ಳಲು ತಂದೆ ತಾಯಿಗಳು ಮತ್ತು ಗುರುಗಳು ಪ್ರಯತ್ನಿಸುತ್ತಾರೆ ಸರಿಯಾಗಿ ಸದ್ಬಳಿಕೆ ಮಾಡಿಕೊಂಡಿ ಸರಿಯಾದ ಮಾರ್ಗದಲ್ಲಿ ನಡೆದಾಗ ಮಾತ್ರ ಜೀವನದ ಮಹತ್ವದ ಗುರಿಯನ್ನು ಮುಟ್ಟಲು ಸಾಧ್ಯ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಸಂತೋಷ ತಮ್ಮಣ್ಣಾ ಪಾರ್ಶಿ ವಹಿಸಿ ಮಾತನಾಡಿ ಜೀವನದಲ್ಲಿ ಯಶಸ್ಸು ಪಡೆಯಬೇಕಾದರೆ ಪ್ರಯತ್ನ ಇರಲೇಬೇಕು ಪ್ರಯತ್ನಕ್ಕೆ ನಿರಂತರ ಅಧ್ಯಯನ ಹಾಗೂ ಹಿರಿಯರ ಮತ್ತು ಯೋಗ್ಯ ಗುರುಗಳ ಮಾರ್ಗದರ್ಶನ ಅವಶ್ಯಕ ಇವುಗಳನ್ನು ಸರಿಯಾಗಿ ತಿಳಿದುಕೊಂಡು ಗುರುವಿನಂತೆ ಜೀವನ ವಿದ್ಯಾರ್ಥಿಗಳು ರೂಪಿಸಿಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ಮೂಡಲಗಿಯ ಆಶಾಕಿರಣ ಕೋ ಆಪ್ ಬ್ಯಾಂಕಿನ ನಿರ್ದೇಶಕ ರಮೇಶ ಪಾಟೀಲ, ಪಟಗುಂದಿಯ ಪ್ರಗತಿಪರ ರೈತರಾದ ಗಿರಿಗೌಡ ಪಾಟೀಲ, ಕಾಲೇಜು ಉಪನ್ಯಾಸಕರಾದ ಗೀತಾ ಹಿರೇಮಠ, ಎಂ.ಎಸ್.ಒಡೆಯರ, ಪಿ.ಬಿ.ಚೌಡಕಿ, ಸುನೀಲ ಸತ್ತಿ, ಪಿ.ಬಿ.ಪುರವಂತ, ರಶ್ಮೀಕಳ್ಳಿಮನಿ, ಸಂವೇದಿತಾ ಮಳಲಿ, ಸವಿತಾ ಪಡದಲ್ಲಿ, ಅಶ್ವಿನಿ ಗುರುವ ಮತ್ತಿತರರು ಹಾಜರಿದ್ದರು.

ಉಪನ್ಯಾಸಕ ಸಂಜೀವ ಮಂಟೂರ ಸ್ವಾಗತಿಸಿದರು ಉಪನ್ಯಾಸಕ ಮಲ್ಲಪ್ಪ ಪಾಟೀಲ ನಿರೂಪಿಸಿದರು ಉಪನ್ಯಾಸಕ ಶಂಕರ ಪಾಟೀಲ ವಂದಿಸಿದರು.

## ಕಮಲೇಶಚಂದ್ರ ಕಮೀಟಿಯ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ಗ್ರಾಮೀಣ ಅಂಚೆ ನೌಕರರಿಂದ ಅನಿರ್ದಿಷ್ಟಾವಧಿ ಮುಷ್ಕರ



ಬಾಗಲಕೋಟೆ : ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘ ಹಾಗೂ ರಾಷ್ಟ್ರೀಯ ಗ್ರಾಮೀಣ ಅಂಚೆ ನೌಕರರ ಸಂಘದಿಂದ7 ನೇ ವೇತನದ ಕಮಲೇಶಚಂದ್ರ ಕಮೀಟಿಯ ವರದಿಯ ಸಂ ಪೂರ್ಣ ಅನುಷ್ಠಾನಕ್ಕಾಗಿ ಒತ್ತಾಯಿಸಿ ಇದೇ ದಿ.12 ರಿಂದ ಅನಿರ್ದಿಷ್ಟಾವಧಿ ಮುಷ್ಕರ ನಡೆಸಲಾಗುವುದು ಎಂದು ರಾಜ್ಯ ಕಾರ್ಯದರ್ಶಿ ಅಶೋಕ ಮನಗೂಳಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂಚೆ ಇಲಾಖೆ ಬೆನ್ನೆಲುಬು ಗ್ರಾಮೀಣ ಪ್ರದೇಶದಲ್ಲಿನ ಅಂಚೆ ಕಛೇರಿಗಳು ದೇಶದ ಕಟ್ಟ ಕಡೆಯ ವ್ಯಕ್ತಿಗೆ ಸೇವೆಯನ್ನು ಒದಗಿಸುವ ಕೆಲಸವನ್ನು ಗ್ರಾಮೀಣ ಅಂಚೆ ನೌಕರರು ಮಾಡುತ್ತಿದ್ದು, ಇಲಾಖೆಯ ಅಧಿಕಾರಿಗಳಿಗೆ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾ ಯಿಸಿ ದಿ.12 ರಂದು ಎಲ್ಲ ಗ್ರಾಮೀಣ ಅಂಚೆ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ನಡೆಸುತ್ತಿದ್ದೇವೆ ಎಂದರು.

ಬೇಡಿಕೆಗಳು : 8 ಗಂಟೆಗಳ ಕೆಲಸ ನೀಡುವುದು ಮತ್ತು ಪಿಂಚಣಿ ಸೇರಿದಂತೆ ಎಲ್ಲ ಸವಲತ್ತುಗಳನ್ನು ಒದಗಿಸುವುದು. ಸೇವಾ ಹಿರಿಯತರದ ಆಧಾರದ ಮೇಲೆ ಸೇವೆ ಸಲ್ಲಿಸಿದ ಜಿಡಿಎಸ್ ನೌಕರರಿಗೆ ವಿಶೇಷ ಇನಕ್ರೀಮೆಂಟ್ ನೀಡುವುದು. ಗ್ರಾಚ್ಯುಟಿ ಮೇಲಿನ ಗರಿಷ್ಟ ಮೊತ್ತ 1.5 ಲಕ್ಷಗಳ ಮಿತಿಯನ್ನು ತೆಗೆದು ಹಾಕಿ ಕಮಲೇಶಚಂದ್ರ ಸಮಿತಿ ಶಿಫಾರಸ್ಸು ಮಾಡಿದಂತೆ ಗರಿಷ್ಟ ರೂ.5 ಲಕ್ಷಗಳವರೆಗೆ ಮೊತ್ತವನ್ನು ನೀಡಬೇಕು. ಜಿಡಿಎಸ್ ನೌಕರರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಸೌಲಭ್ಯಗಳು ಒದಗಿಸಬೇಕು. ಜಿಡಿಎಸ್ ನೌಕರರಿಗೆ 30 ದಿನಗಳ ವೇತನ ಸಹಿತ ರಜೆ ನೀಡಬೇಕು. 7ನೇ ವೇತನದ ಶಿಫಾರಸ್ಸಿನಂತೆ 180 ದಿನಗಳ ವರೆಗೆ ರಜೆ ಉಳಿಸಿಕೊಳ್ಳಲು ಅವಕಾಶ ಕಲ್ಪಿಸಬೇಕು.ಗ್ರುಪ್ ಇನ್ಸೂರನ್ಸ ಕವರೇಜ ರೂ.5 ಲಕ್ಷಗಳವರೆಗೆ ಹೆಚ್ಚಿಸುವಂತೆ ಒತ್ತಾಯಿಸಲಾಗುವುದು ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಚ್.ಬಿ.ಪತಗೌಡ್ರ, ಎಂ.ಆರ್. ನಂದ ವಾಡಗಿ ಉಪಸ್ಥಿತರಿದ್ದರು.

### ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘ ಗದಗ ವಿಭಾಗದ ನೌಕರರು

## ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದ ಹಾವೇರಿ ಸಂಸದರ ಕಚೇರಿಯ ಮುಂದೆ ಪ್ರತಿಭಟನೆ

ಗದಗ : ಅಖಿಲ ಭಾರತ ಗ್ರಾಮೀಣ ಅಂಚೆ ನೌಕರರ ಸಂಘ ಗದಗ ವಿಭಾಗದ ನೌಕರರು ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದ ಹಾವೇರಿ ಸಂಸದರ ಕಚೇರಿಯ ಮುಂದೆ ಪ್ರತಿಭಟನೆ ಮಾಡಿದರು.

ವಲಯದ ಸಹ ಕಾರ್ಯದರ್ಶಿಗಳಾ ಕಾಂ. ಎಂ. ಎನ್. ಕುರಹಟ್ಟಿ ಮಾತನಾಡಿ ಕಮಲೇಶ ಚಂದ್ರ 7ನೇ ವೇತನ ವರದಿಯ ಕೆಲವು ಮಾತ್ರ ನಮಗೆ ಇಲಾಖೆ ಕೊಟ್ಟಿರುತ್ತದೆ. ನಮ್ಮ ಹಲವಾರು ಬೇಡಿಕೆಗಳನ್ನು ಸರ್ಕಾರ ಈಡೇರಿಸುವುದಿಲ್ಲ. ನಮ್ಮ ಹೋರಾಟದಿಂದ ನಮಗೆ ತುರ್ತು ರಜೆ, ಹೆಣ್ಣು ಮಕ್ಕಳಿಗೆ ಹೆರಿಗೆ ಭತ್ಯೆ, ಮಕ್ಕಳ ಶಿಕ್ಷಣ ಭತ್ಯೆ, ಬೋನಸ್ ಮೊತ್ತ 3500 ರಿಂದ 7000 ವರೆಗೆ ಸಿಲಿಂಟ್ ಲಿಮಿಟ್ ಹೆಚ್ಚಳ, ಕಂಬೈಂಡ್ ಡ್ಯೂಟಿ ಎಲಾನ್ಸ್ ಕೊಡಿಸುವುದರಲ್ಲಿ ನಮ್ಮ ಹೋರಾಟದಿಂದ ಬಂದಿವೆ.

ಈಗ ನಮ್ಮ ಬೇಡಿಕೆಗಳಾದ 8 ಗಂಟೆಗೆಳ ಕೆಲಸ ನೀಡುವುದು ಮತ್ತು ಪಿಂಚಣಿ ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ನೀಡುವುದು. ಸೇವಾ ಹಿರಿತನದ ಆಧಾರದ ಮೇಲೆ 12/24/36 ಸೇವೆ ಸಲ್ಲಿಸಿದ ಜಿಡಿಎಸ್ ನೌಕರರಿಗೆ ವಿಶೇಷ ಇಂಕ್ರಿಮೆಂಟ್ ನೀಡುವುದು. ಅವೈಜ್ಞಾನಿಕ ಗುರಿ ನೀಡಿ ಮೇಳಗಳನ್ನು ನಡೆಸುತ್ತಿರುವುದನ್ನು ನಿಲ್ಲಿಸುವುದು. ಗ್ರುಪ್ ಇನ್ಸುರೆನ್ಸ್ ಕವರೇಜ್ ರೂ. 5.00 ಲಕ್ಷದವರೆಗೆ ಹೆಚ್ಚಿಸುವುದು. ಅವೈಜ್ಞಾನಿಕ ಗುರಿ ಸಾಧಿಸಿರುವ ಜಿ.ಡಿ.ಎಸ್. ನೌಕರರಿಗೆ ನೀಡುತ್ತಿರುವ ಕಿರುಕುಳವನ್ನು ನಿಲ್ಲಿಸುವುದು.

ಜೆ.ಡಿ.ಎಸ್. ಗ್ರಾಚುವಿಟ್ ಹಣವನ್ನು ರೂ. 5.0 ಲಕ್ಷದವರೆಗೆ ಹೆಚ್ಚಿಸುವುದು. 180 ದಿನಗಳ ರಜೆ ಉಳಿಸಿಕೊ ಳ್ಳಲು ಅವಕಾಶ ಕಲ್ಪಿಸುವುದು. ಜೆ.ಡಿ.ಎಸ್. ಮತ್ತು ಅವರ ಕುಟುಂಬದ ಸದಸ್ಯರಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು. ಮುಂತಾದಗಳನ್ನು ಬೇಡಿಕೆಗಳನ್ನು ಈಡೇರಿಸುವಂತೆ ಘೋಷಣೆಗಳೊಂದಿಗೆ ಹಾವೇರಿ ಲೋಕಸಭಾ ಸದಸ್ಯರ ಕಚೇರಿ ಮುಂದುಗಡೆ ಪ್ರತಿಭಟನೆ ಮಾಡಿದರು.

ಈ ಸಂದರ್ಭದಲ್ಲಿ ಜಿ. ಆರ್. ಕುರಹಟ್ಟಿ, ಬಿ. ಎಫ್. ಹಡಪದ, ಪಿ. ವಿ. ಇಟ್ಟಂಗಿ, ಹೆಚ್. ಎಂ. ಉದ್ದಾರ, ಉಮೇಶ ಮೇಳಣ್ಣವರ, ಎಂ. ಆರ್. ಬರದೂರ, ಎಸ್. ಬಿ. ತಡಸಿ, ಪ್ರವೀಣಾ ಚವ್ಹಾಣ, ಮಹೇಶ ಅರಹುಣಸಿ, ಬಸವರಾಜ ನಡೇದ, ಮಹಾಂತೇಶ ಅಂಗಡಿ, ಎ. ಡಿ. ಕೊಪ್ಪದ, ಅಶ್ವಿನಿ ಕುಲಕರ್ಣಿ, ರೇಣುಕಾ ಹಳೇಮ್ಮನವರ, ವಿನಾಯಕ ಅಚಲಕರ ಸೇರಿದಂತೆ ಜಿಲ್ಲಾ ಗ್ರಾಮೀಣ ಅಂಚೆ ನೌಕರರು ಉಪಸ್ಥಿತರಿದ್ದರು.

## ಸಂಸ್ಕೃತಿ ಉಳಿವಿಗೆ ಸ್ವಯಂ ಪ್ರೇರಣೆಅಗತ್ಯ: ಡಾ. ದಡ್ಡಿ



ಜಮಖಂಡಿ : ಭಾರತೀಯ ಸಂಸ್ಕೃತಿ, ಸಂಸ್ಕಾರ ಮತ್ತು ಭವ್ಯ ಪರಂಪರೆಯನ್ನು ಸಾರ್ವಜನಿಕರು ಸ್ವಯಂ ಪ್ರೇರಣೆಯಿಂದ ಮುಂದಾಗಿ ಉಳಿಸಿ ಬೆಳೆಸಬೇಕಾದ ತೀವ್ರ ಅಗತ್ಯವಿದೆ ಎಂದು ನಾಡೋಜ ಡಾ.ಎಚ್.ಜಿ. ದಡ್ಡಿ ಅಭಿಪ್ರಾಯ ಪಟ್ಟರು.

ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಮತ್ತು ಬಾದಾಮಿ ತಾಲ್ಲೂಕು ಘಟಕಗಳು ಹಾಗೂ ಕರ್ನಾಟಕ ಜಾನಪದ ಪರಿಷತ್ತು ಜಿಲ್ಲಾ ಘಟಕದ ಆಶ್ರಯದಲ್ಲಿ ಬಾದಾಮಿಯಲ್ಲಿ ಡಿ.17 ರಂದು ಜರುಗಲಿರುವ ಬೆಳಗಾವಿ ವಿಭಾಗ ಮಟ್ಟದ ಪ್ರಥಮ ಸಾಂಸ್ಕೃತಿಕ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾದ ಪ್ರಯುಕ್ತ ಸಂಘಟಕರು ಅವರ ಆಸ್ಪತ್ರೆಗೆ ತೆರಳಿ ನೀಡಿದ ಅಧಿಕೃತ ಆಹ್ವಾನವನ್ನು ಸ್ವೀಕರಿಸಿ ಅವರು ಮಾತನಾಡಿದರು.

ವೈದ್ಯ ವೃತ್ತಿಯ ಜೊತೆಗೆ ಸಾಹಿತ್ಯ, ಕ್ರೀಡೆ, ಫೋಟೊಗ್ರಾಫಿ, ಸಂಘ–ಸಂಸ್ಥೆಗಳ ವಿವಿಧ ಹುದ್ದೆಗಳ ನಿರ್ವಹಣೆ, ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗಾಗಿ ಹೋರಾಟ ಸೇರಿದಂತೆ ಮುಂತಾದ ಕ್ಷೇತ್ರಗಳಲ್ಲಿ ನಿರಂತರವಾಗಿ ಚಟುವಟಿಕೆಗಳನ್ನು ಹಮ್ಮಿಕೊಂ ಡು ಬರಲು ಅಭಿಮಾನಿಗಳು, ಸ್ನೇಹಿತರು, ಕುಟುಂಬದ ಸದಸ್ಯರು, ಸಾರ್ವಜನಿಕರು ನೀಡಿದ ಸಹಕಾರದಿಂದ ಸಾಧ್ಯವಾಗಿದೆ ಎಂದರು.

ಬಸವಜ್ಯೋತಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ.ಟಿ.ಪಿ.ಗಿರಡ್ಡಿ ಮಾತನಾಡಿ, ಅಪ್ರತಿಮ ಪ್ರತಿಭೆಯ ಅಪರೂಪದ ಸಾಂಸ್ಕೃತಿಕ ರಾಯಭಾರಿ ಎನಿಸಿರುವ ನಾಡೋಜ ಡಾ.ಎಚ್.ಜಿ. ದಡ್ಡಿ ಅವರು ಸಾಂಸ್ಕೃತಿಕ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಸರ್ವಾಧ್ಯಕ್ಷರ ಸ್ಥಾನದ ಘನತೆ ಮತ್ತು ಗೌರವ ಹೆಚ್ಚಿಸಿದೆ ಎಂದರು.

ನಿವೃತ್ತ ಪ್ರಾಚಾರ್ಯ ಡಾ.ಸಂಗಮೇಶ ಮಟೋಳಿ ಮಾತನಾಡಿ, ನಾಡೋಜ ಡಾ.ಎಚ್.ಜಿ. ದಡ್ಡಿ ಅವರಿಗೆ ಈ ವರೆಗೆ ಸಂದಿರುವ ಹಲವಾರು ಪ್ರಶಸ್ತಿ, ಪುರಸ್ಕಾರ ಮತ್ತು ಗೌರವ ಸನ್ಮಾನಗಳು ಅವರ ಕತೃತ್ವ ಶಕ್ತಿಗೆ ಹಿಡಿದ ಕೈಗನ್ನಡಿ ಎನಿಸಿವೆ ಎಂದರು.

ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಸರ್ವಾಧ್ಯಕ್ಷರಿಗೆ ಆಹ್ವಾನ ನೀಡಿ ಹಾಗೂ ಸಮ್ಮೇಳನದ ಪ್ರಚಾರ ಸಾಮಗ್ರಿಯನ್ನು ಬಿಡುಗಡೆ ಮಾಡಿ ಮಾತನಾಡಿ, ಮುಂಬರುವ ದಿನಗಳಲ್ಲಿ ತತ್ತ್ವಪದಕಾರರ ಹಾಗೂ ಕಲಾವಿದರ ಸಮ್ಮೇಳನಗಳನ್ನು ಆಯೋಜಿಸಲಾಗುವುದು ಎಂದರು.

ನಿವೃತ್ತ ಶಿಕ್ಷಕ ಎಂ.ಬಿ. ಇಂಡಿ ಮಾತನಾಡಿದರು. ಸಾಹಿತಿ ರುದ್ರಗೌಡ ಪಾಟೀಲ, ಶ್ರೀನಿವಾಸ ಅಪರಂಜಿ, ಪಿ.ಆರ್. ರಾಮತಾಳ, ಕಸಾಪ ಗೌರವ ಕಾರ್ಯದರ್ಶಿ ವಿನೋದ ಲೊಣಿ, ಇಲಿಯಾಸ್ ಭೋಜಗಾರ ಇದ್ದರು. ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಸಂತೋಷ ತಳಕೇರಿ ನಿರೂಪಿಸಿದರು.

### ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ನಂತರ ಬರ ಪರಿಹಾರ ವಿತರಣೆ: ಸಚಿವ ಎನ್. ಚೆಲುವರಾಯಸ್ವಾಮಿ

## 223 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ



ರಬಕವಿ–ಬನಹಟ್ಟಿ: ಇಡೀ ರಾಷ್ಟ್ರದಲ್ಲಿ ಪ್ರಪ್ರಥಮವಾಗಿ ರೈತರ ಪರವಾಗಿ ರಾಜ್ಯದ 223 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಣೆ ಮಾಡಲಾಗಿದ್ದು , ಈ ಕುರಿತು ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಬರ ಪರಿಸ್ಥಿತಿಯ ಕುರಿತು ಎಲ್ಲ ರೀತಿಯ ಸರ್ವೆ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು , ಪರಿಹಾರ ಕೊಡಲಿಕ್ಕೆ ಎಲ್ಲ ರೀತಿಯ ಸಿದ್ಧತೆಗಳನ್ನು ಮಾಡಿಕೊಂಡಿದ್ದು , ಆದಷ್ಟು ಬೇಗನೆ ಕೇಂದ್ರ ಸರ್ಕಾರದ ಮಂಜೂರಾತಿ ದೊರೆತ ನಂತರ ಪರಿಹಾರವನ್ನು ವಿತರಣೆ ಮಾಡಲಾಗುವುದು ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಬುಧವಾರ ಸಮೀಪದ ಜಗದಾಳ ಗ್ರಾಮದ ಸದಾಶಿವ ಬಂಗಿ ಅವರ ತೋಟವನ್ನು ವೀಕ್ಷಣೆ ಮಾಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ನಾನು, ಸಚಿವರಾದ ಕೃಷ್ಣ ಭೈರೆಗೌಡ ಮತ್ತು ಪ್ರಿಯಾಂಕ್ ಖರ್ಗೆ ಮೂರು ಬಾರಿ ಆರ್ಥಿಕ ಸಚಿವರು ಮತ್ತು ಸಂಬಂಧಪಟ್ಟ ಇಲಾಖೆಯ ಕಾರ್ಯದರ್ಶಿಗಳನ್ನು ಭೆಟ್ಟಿಯಾಗಿ ಚರ್ಚಿಸಿ, ರಾಜ್ಯದ ಪರಿಸ್ಥಿತಿಯನ್ನು ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದೇವೆ. ಅವರು ಇದುವರೆಗೆ ಘೋಷಣೆ ಮಾಡದೇ ಇರುವುದರಿಂದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಪ್ರಾರಂಭಿಕವಾಗಿ ಎಕರೆಗೆ ರೂ. ಎರಡು ಸಾವಿರ ನೀಡಲು ಘೋಷಣೆ ಮಾಡಿದ್ದಾರೆ.

ಕೃಷಿ ಭಾಗ್ಯ ಯೋಜನೆಯನ್ನು ಚಾಲನೆ ಮಾಡಿದ್ದೇವೆ. ಮುಂದಿನ ವರ್ಷದ ಮಾರ್ಚ್ ಅಂತ್ಯದವರೆಗೆ 30 ರಿಂದ 32 ಸಾವಿರ ಕೃಷಿ ಹೊಂಡಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಕೃಷಿಗೆ ಸಂಬಂಧಪಟ್ಟ ಯೋಜನೆಗಳು ಜಾರಿಯಲ್ಲಿವೆ. ರೂ. ಐದು ಲಕ್ಷದವರೆಗೆ ಬಡ್ಡಿರಹಿತ ಸಾಲವನ್ನು ನೀಡುತ್ತಿದ್ದೇವೆ. ಜಿಲ್ಲೆಗೆ ಒಂದು ಇಲ್ಲವೆ ಎರಡು ಹೈಟೆಕ್ ರಾಶಿ ಕೇಂದ್ರಗಳನ್ನು ಆರಂಭಿಸಲಾಗುವುದು ಎಂದು ಸಚಿವ ಚೆಲುವರಾಯಸ್ವಾಮಿ ತಿಳಿಸಿದರು.

ಕೃಷಿ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಎ. ಬಿ. ಪಾಟೀಲ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪಿ. ಎಲ್. ಪಾಟೀಲ, ಕುಲಸಚಿವ ಡಾ. ಮಂಜುನಾಥ, ಜಾರಿ ದಳದ ಅಧಿಕಾರಿ ಬಸವರಾಜ ಮಾಳೆದ, ಕೃಷಿ ಇಲಾಖೆ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಕೃಷಿ ಅಧಿಕಾರಿಗಳಾದ ಮೈನೋದ್ದಿನ್ ಜಮಖಂಡಿ, ಎಸ್. ಎಂ. ಬಿರಾದಾರ, ಗುರುಲಿಂಗ ಚಿಂಚಲಿ, ರಂಗನಗೌಡ ಪಾಟೀಲ, ಮಲ್ಲಪ್ಪ ಸಿಂಗಾಡಿ, ಮಾರುತಿ ಸೋರಗಾಂವಿ, ಸುಭಾಸ ಉಳ್ಳಾಗಡ್ಡಿ , ಈಶ್ವರ ಬಂಗಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಕೃಷಿ ಸಚಿವರು ಹೊಸೂರಿನ ಮಹಾದೇವ ಚೋಳಿಯವರ ತೋಟಕ್ಕೂ ಭೇಟಿ ನೀಡಿದರು.

## ದಾನಮ್ಮದೇವಿ ಜಾತ್ರೆ: ಹೊಟ್ಟೆ ತುಂಬ ಹೋಳಿಗೆ, ಕಿಚಡಿ





ರಬಕವಿ–ಬನಹಟ್ಟಿ : ಬನಹಟ್ಟಿಯ ಬಸವ ನಗರದಲ್ಲಿ ಮಂಗಳವಾರ ದಾನಮ್ಮದೇವಿ ಜಾತ್ರೆ ಸಂಭ್ರಮ ಸಡಗರದಿಂದ ನಡೆಯಿತು.

ಶ್ರೀ ದಾನಮ್ಮ ದೇವಿ ಜಾತ್ರೆಯ ನಿಮಿತ್ಯ ಬೆಳಿಗ್ಗೆ ಹನ್ನೊಂದು ಗಂಟೆಗೆ ಮಹಿಳೆಯರಿಗೆ ಉಡಿ ತುಂಬುವುದು, ಪಲ್ಲಕ್ಕಿ ಉತ್ಸವ, ಮಂಗಳಾರತಿ ಕಾರ್ಯಕ್ರಮ ಬಸವ ನಗರದಲ್ಲಿ ಒಳ್ಳೆಯ ವಿಜೃಂಭಣೆಯಿಂದ ನಡೆಯಿತು. ಸುಮಾರು ನಾಲ್ಕು ಸಾವಿರ ಜನ ಭಕ್ತಾದಿಗಳು ಹೋಳಿಗೆ ಮತ್ತು ಕಿಚಡಿ ಪ್ರಸಾದ ಸೇವಿಸಿದರು.

ಹೋಳಿಗೆ, ಕಿಚಡಿ ತಯಾರಿಸಿದ ನೂರು ಜನ ಮಹಿಳೆಯರು:

ಒಂದು ಕಡೆ ಹೋಳಿಗೆ ಮತ್ತು ಹೂರಣದ ರಾಶಿ, ಮತ್ತೊಂದೆಡೆ ಕಿಚಡಿಯೊಂದಿಗೆ ಘಮ ಘಮ ಸುವಾಸನೆಯ ಸಾಂಬಾರು.


ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಹೋಳಿಗೆ, ಕಿಚಡಿ ಸವಿದರೆ, ಮತ್ತೊಂದು ಕಡೆಯಲ್ಲಿ ನೂರಕ್ಕೂ ಅಧಿಕ ಮಹಿಳೆಯರು ಹೋಳಿಗೆ, ಕಿಚಡಿ ತಯಾರಿಸುವಲ್ಲಿ ತೊಡಗಿದ್ದರು. ಹೋಳಿಗೆ ತಯಾರಿ ದಿನಿವಿಡೀ ನಡೆದರೆ, ದರ್ಶನಕ್ಕೆ ಬಂದ ಭಕ್ತರು ಸರದಿಯಲ್ಲಿ ನಿಂತು ಭೋಜನ ಸವಿದರು.

ದೇಗುಲದ ಪ್ರವೇಶ ದ್ವಾರವನ್ನು ವಿವಿಧ ಬಗೆಯ ಹೂವುಗಳಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ಭಜನೆ, ಪ್ರಾರ್ಥನೆ, ವಿವಿಧ ಕೈಂಕರ್ಯಗಳು ನೆರವೇರಿದವು.

ಕಾರ್ಯಕ್ರಮದಲ್ಲಿ ಕಾಡಪ್ಪ ಯಂಕಾಚಿ, ಶಿವಾನಂದ ಬುದ್ನಿ, ಸಂಕಪ್ಪ ಟಿರಕಿ, ಮಂಜು ಮನವಾಡೆ,

ಕಾಡು ಸಿದ್ದಾಪುರ, ಮಲ್ಲಪ್ಪ ಬಂಡಿಗಣಿ, ಪ್ರಭು ಬಂಡಿಗಣಿ, ಮಾಂತು ಜಾಲಿಕಟ್ಟಿ, ಈರಪ್ಪ ಸಿದ್ದಾಪುರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ರಬಕವಿ: ಸಂಭ್ರಮದ ದಾನಮ್ಮದೇವಿ ಜಾತ್ರೆ, ಕಾರ್ತಿಕೋತ್ಸವ





ರಬಕವಿ–ಬನಹಟ್ಟಿ: ಮಂಗಳವಾರ ಛಟ್ಟಿ ಅಮವಾಸ್ಯೆಯ ದಿನದಂದು ರಬಕವಿಯ ದಾನಮ್ಮದೇವಿ ಜಾತ್ರೆ ಮತ್ತು ಕಾರ್ತಿಕೋತ್ಸವ ಸಂಭ್ರಮ ಸಡಗರಿಂದ ನಡೆಯಿತು.

ಜಾತ್ರೆ ಮತ್ತು ಕಾರ್ತಿಕೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ ದಾನಮ್ಮ ದೇವಿಗೆ ವಿಶೇಷ ಪೂಜೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಂಜೆ ದಾನಮ್ಮದೇವಿಯನ್ನು ಬಂಗಾರದ ಮುಖ ಮತ್ತು ಬೃಹತ್ ಹೂ ಮಾಲೆಗಳಿಂದ ಶೃಂಗರಿಸಲಾಗಿತ್ತು. ಮಧ್ಯಾಹ್ನ ದಾನಮ್ಮ ದೇವಿಯ ಪಲ್ಲಕ್ಕಿ ಉತ್ಸವ ನಗರದ ಪ್ರಮುಖ ಬೀದಿಗಳಲ್ಲಿ ನಡೆಯಿತು. ನೂರಾರು ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಿತು. ಸಂಜೆ ಮತ್ತೇ ದೇವಸ್ಥಾನದ ಆವರಣದಲ್ಲಿ ಪಲ್ಲಕ್ಕಿ ಸೇವೆ ನಡೆಯಿತು.

ಜಾತ್ರೆಯ ಅಂಗವಾಗಿ ಗಜಾನನ ನಾಗರಾಳರ ಕರಡಿ ವಾದನವನ್ನು ಹಮ್ಮಿಕೊಳ್ಳಲಾಗಿತ್ತು.

ದಾನಮ್ಮದೇವಿ ದೇವಾಲಯ ಟ್ರಸ್ಟ್ ಅಧ್ಯಕ್ಷ ಶಿವಜಾತ ಉಮದಿ ಕಾರ್ತಿಕೋತ್ಸವಕ್ಕೆ ಚಾಲನೆ ನೀಡಿದರು. ನಾರಾಯಣ ಬೋರಗಿನಾಯಕ, ಬಸವರಾಜ ತೆಗ್ಗಿ , ನೀಲಕಂಠ ಮುತ್ತೂರ, ಪ್ರೊ. ಎಂ. ಎಸ್. ಬದಾಮಿ, ಉದಯ ಜಿಗಜಿನ್ನಿ, ಡಾ. ಸಂಗಮೇಶ ಹತಪಕಿ, ಶಿವಾನಂದ ದಾಶ್ಯಾಳ, ಮಲ್ಲಿಕಾರ್ಜುನ ಜತ್ತಿ, ಸೋಮಶೇಖರ ಭುಯ್ಯಾರ, ರೇವಣ್ಣ ಉಮದಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬಗೆಹರಿದ ರಸ್ತೆ ಸಮಸ್ಯೆ: ಶಾಲಾ ಮಕ್ಕಳು ಖುಷ್




ತೇರದಾಳ : ಇಲ್ಲಿಯ ಅಂಬೇಡ್ಕರ್ ನಗರ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ತೆರಳಲು ಮಕ್ಕಳಿಗೆ ಉಂಟಾಗಿದ್ದ ರಸ್ತೆ ಸಮಸ್ಯೆ ಇಂದು ಸಾರ್ವಜನಿಕರ ಸಹಕಾರದೊಂದಿಗೆ ಬಗೆಹರಿಯುವುದರ ಮೂಲಕ ಅನುಕೂಲವಾಗಿದೆಯೆಂದು ಶಿಕ್ಷಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಈ ಶಾಲೆಯ ಹಿಂದುಗಡೆ ರಸ್ತೆ ನಿರ್ಮಿಸಿ, ಹೊಸ ಬಾಗಿಲು ಜೋಡಿಸಿ ವಿದ್ಯಾರ್ಥಿಗಳ ಸಂಚಾರಕ್ಕೆ ಅನುಕೂಲ ಮಾಡಲಾಗಿದೆ. ಕಳೆದ ಹಲವು ವರ್ಷಗಳಿಂದ ಉಂಟಾಗಿದ್ದ ರಸ್ತೆ ಸಮಸ್ಯೆಗೆ ಇತಿಶ್ರೀ ಹಾಡಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎ.ಕೆ. ಬಸಣ್ಣವರ, ಶಿಕ್ಷಣ ಸಂಯೋಜಕ ಬಿ.ಎಂ.ಹಳೇಮನಿ, ತೇರದಾಳ ಪಶ್ಚಿಮ ವಲಯ ಸಮೂಹ ಸಂಪನ್ಮೂಲ ವ್ಯಕ್ತಿ ಅನಂತರಾಜು ಮುಧೋಳ ತಿಳಿಸಿದ್ದಾರೆ.

ಶಾಲೆಗೆ ಹೋಗಲು ಉಂಟಾಗಿದ್ದ ರಸ್ತೆ ಸಮಸ್ಯೆ ಬಗೆಹರಿಯಲು ಸಹಕರಿಸಿದ ಪುರಸಭೆ ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳಿಗೆ, ಶಾಲೆಯ ಎಸ್ ಡಿ ಎಂ ಸಿ ಯವರಿಗೆ, ಶಾಲೆಯ ಪೋಷಕರಿಗೂ ಶಿಕ್ಷಣ ಇಲಾಖೆ ಅಧಿಕಾರಿಗಳು ವಂದನೆಗಳನ್ನು ತಿಳಿಸಿದ್ದಾರೆ.

# ತಾಲೂಕು ನಿಯೋಗದಿಂದ ಸಿಎಂ ಭೇಟಿ



ಮಹಾಲಿಂಗಪುರ : ಪಟ್ಟಣವನ್ನು ತಾಲ್ಲೂಕು ಕೇಂದ್ರ ಎಂದು ಕೂಡಲೇ ಘೋಷಿಸುವಂತೆ ಒತ್ತಾಯಿಸಿ ನಡೆದಿರುವ ಹೋರಾಟವು 608 ದಿನಗಳನ್ನು ಪೂರೈಸಿ ಮುನ್ನಡೆದಿದೆ.

ಡಿಸೆಂಬರ್ 12 ರಂದು ತಾಲೂಕು ಹೋರಾಟದ ನಿಯೋಗವು ಕಾಂಗ್ರೆಸ್ ಮುಖಂಡ ಸಿದ್ದೂ ಕೊಣ್ಣೂರ ನೇತ್ರತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಬೆಳಗಾವಿಯಲ್ಲಿ ಭೇಟಿ ಮಾಡಿ ನಮ್ಮದು ಮೂವತ್ತು ವರ್ಷಗಳಿಂದ ತಾಲೂಕಿಗಾಗಿ ಬೇಡಿಕೆ ಮತ್ತು ಹೋರಾಟವಿದ್ದು , ಈಗಾಗಲೇ ನಮ್ಮ ಹೋರಾಟವು ಆರು ನೂರು ದಿನಗಳನ್ನು ಮುಗಿಸಿ ಮುನ್ನಡೆದಿದೆ. ದಯವಿಟ್ಟು ತಾಲೂಕು ಘೋಷಿಸಿ ಎಂದು ನಿಯೋಗದ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಒತ್ತಾಯಿಸಿದರು.

ತಾವು ವಿರೋಧ ಪಕ್ಷದಲ್ಲಿ ಇದ್ದಾಗ ತಾಲೂಕು ನಿಯೋಗ ಭೇಟಿಯಾದ ವೇಳೆ, ನಮ್ಮ ಕಾಂಗ್ರೆಸ್ ಸರ್ಕಾರ ಬಂದು, ನಾನು ಸಿ.ಎಂ. ಆದರೆ ಖಂಡಿತಾ ತಾಲೂಕು ಮಾಡುತ್ತೇನೆ ಅಂತಾ ಗ್ಯಾರಂಟಿ ನೀಡಿದ್ದಿರಿ. ಇಂದು ನಿಮ್ಮದೇ ಸರ್ಕಾರ ಮತ್ತು ನೀವೇ ಮುಖ್ಯಮಂತ್ರಿಗಳಾಗಿರುವುದರಿಂದ ನಮ್ಮ ಮಹಾಲಿಂಗಪುರ ತಾಲೂಕು ಎಂದು ಘೋಷಿಸಿ, ನಮ್ಮ ಮೂರು ದಶಕಗಳ ಬೇಡಿಕೆ ಈಡೇರಿಸಿ ಎಂದು ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಸಂಗಪ್ಪ ಹಲ್ಲಿ ಸಿಎಂ ಅವರಿಗೆ ಒತ್ತಾಯಿಸಿದರು.

ನಿಯೋಗದಿಂದ ಮನವಿ ಸ್ವೀಕರಿಸಿದ ಸಿ.ಎಂ. ಸಿದ್ದರಾಮಯ್ಯ ಅವರು ಕಂದಾಯ ಸಚಿವರು, ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಿ, ಪರಿಶೀಲಿಸಿ ಮುಂಬರುವ ದಿನಗಳಲ್ಲಿ ಮಹಾಲಿಂಗಪುರ ತಾಲೂಕು ಘೋಷಿಸುವ ಭರವಸೆ ನೀಡಿದರು.

ನಂತರ ನಿಯೋಗದ ಸದಸ್ಯರು ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರನ್ನು ಭೇಟಿ ಮಾಡಿ, ಮಹಾಲಿಂಗಪುರ ತಾಲೂಕು ರಚಿಸಲು ಸರ್ಕಾರದ ಮೇಲೆ ತಾವು ಒತ್ತಡ ಹಾಕಬೇಕೆಂದು ನಿಯೋಗದಿಂದ ಒತ್ತಾಯಿಸಲಾಯಿತು.

ಸಿ.ಎಂ. ಭೇಟಿಯ ಸಂದರ್ಭದಲ್ಲಿ ಬಾಗಲಕೋಟೆ ಜಿಲ್ಲಾಪಂಚಾಯತ್ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ಮಹಿಳಾ ಘಟಕದ ಅಧ್ಯಕ್ಷೆ ರಕ್ಷಿತಾ ಈಟಿ, ಬಾಗಲಕೋಟೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಸ್. ಜಿ. ನಂಜಯ್ಯನಮಠ, ಕಾಂಗ್ರೆಸ್ ಮುಖಂಡ ಸಿದ್ದೂ ಕೊಣ್ಣೂರ, ಮಹಾಲಿಂಗಪುರ ತಾಲೂಕು ಹೋರಾಟ ಸಮಿತಿಯ ಧರೆಪ್ಪ ಸಾಂಗ್ಲೀಕರ, ರಂಗನಗೌಡ ಪಾಟೀಲ್, ಎಸ್. ಎಂ. ಪಾಟೀಲ್, ಮಹಾದೇವ ಮಾರಾಪೂರ, ಡಿ. ಎಸ್. ಪಟ್ಟಣಶೆಟ್ಟಿ, ವೀರೇಶ ಆಸಂಗಿ, ಶಿವನಗೌಡ ಪಾಟೀಲ್ , ಮಹ್ಮದ್ ಸಾಬ ಹೂಲಿಕಟ್ಟಿ , ಮಹಾಲಿಂಗ ಕಲಾಗತಿ, ನ್ಯಾಯವಾದಿಗಳಾದ ಎಂ. ಎಸ್. ಮನ್ನಯ್ಯನವರಮಠ, ಎಂ.ಕೆ. ಸಂಗನ್ನವರ, ಸಲೀಂ ಕರೋಶಿ ಸೇರಿದಂತೆ ಹಲವಾರು ಧುರೀಣರು ನಿಯೋಗದಲ್ಲಿ ಭಾಗವಹಿಸಿದ್ದರು.

# ಬ್ಯಾಂಕಿ ಸದಸ್ಯರ ನೋವುಗಳಿಗೆ ಸ್ಪಂದಿಸುತ್ತೇವೆ



ರಬಕವಿ-ಬನಹಟ್ಟಿ: ಜಮಖಂಡಿ ಅರ್ಬನ್ ಬ್ಯಾಂಕಿನ ಸದಸ್ಯರ ನೋವುಗಳಿಗೆ ಸ್ಪಂದಿಸುತ್ತೇವೆ. ಸಹಕಾರಿ ಸಂಸ್ಥೆ ಯಾವುದೆ ಜಾತಿ ಸಮುದಾಯಕ್ಕೆ ಸೇರಿದ್ದಲ್ಲ. ಪ್ರತಿಯೊಬ್ಬರ ಸಹಕಾರದಿಂದ ನಡೆಯುವುದರಿಂದ ಸಹಕಾರಿ ಸಂಘಗಳು ಅಭಿವೃದ್ಧಿಯಾಗುತ್ತವೆ. ಷೇರುದಾರರಿಗೆ ಚ್ಯುತಿ ಬರದಂತೆ ಗಮನ ನೀಡುತ್ತೇವೆ. ಯುವಕರಿಗೆ ಶಕ್ತಿ ತುಂಬಿ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಗುರುನಿಂಗ ಎಸ್. ನ್ಯಾಮಗೌಡ ತಿಳಿಸಿದರು.

ಸೋಮವಾರ ಬನಹಟ್ಟಿಯ ಭದ್ರನವರ ಕಲ್ಯಾಣ ಮಂಟಪದಲ್ಲಿ, ಜಮಖಂಡಿ ಅರ್ಬನ್ ಬ್ಯಾಂಕ್ ಚುನಾವಣೆಯ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

ರಾಹುಲ ಕಲೂತಿ ಮಾತನಾಡಿ, ಎಲ್ಲ ಸಮುದಾಯಗಳಿಗೂ ಅವಕಾಶ ನೀಡಬೇಕು ಎಂದು ನಮ್ಮ ಗುಂಪಿನ ಆಶಯವಾಗಿದೆ. 30 ವರ್ಷಗಳಿಂದ ಆಡಳಿತ ಚುಕ್ಕಾಣಿ ಹಿಡಿದವರು ಒಡೆದು ಆಳುವ ನೀತಿಯನ್ನು ಅನುಸರಿಸುತ್ತಿದ್ದಾರೆ. ಇದು ಖಂಡನೀಯವಾಗಿದೆ. ಬ್ಯಾಂಕ್ ಅಭಿವೃದ್ಧಿಯಾಗಬೇಕು ಎಂಬುದು ನಮ್ಮ ಗುಂಪಿನ ಮುಖ್ಯ ಉದ್ದೇಶವಾಗಿದೆ. ಯುವಕರಿಗೂ ಕೂಡಾ ಸಮಾನ ಅವಕಾಶಗಳನ್ನು ನೀಡಬೇಕು ಎಂದು ತಿಳಿಸಿದರು.

ಯುವ ಮುಖಂಡ ರಾಜೇಂದ್ರ ಸುಭಾಷ್ ಭದ್ರನ್ನವರ ಮಾತನಾಡಿ, ಜಮಖಂಡಿ ಅರ್ಬನ್ ಬ್ಯಾಂಕಿನ ಸ್ಥಳೀಯ ಸಲಹಾ ಸಮಿತಿ ರಚನೆ ಮಾಡುವಾಗ ಅನೇಕ ವರ್ಷಗಳಿಂದ ಕೇವಲ ಏಕೈಕ ವ್ಯಕ್ತಿಗೆ ಮಣೆ ಹಾಕುತ್ತಿರುವುದು ಸರಿಯಲ್ಲ. ಈ ಬಾಗದಲ್ಲಿ ಸಾಕಷ್ಟು ಜನ ಸಹಕಾರಿಗಳು ಇದ್ದಾರೆ. ಅವರಿಗೂ ಪ್ರಾಶಸ್ತ್ಯ ನೀಡಬೇಕು ಎಂದರು.

ಸಭೆಯಲ್ಲಿ ರಾಜಶೇಖರ ಸೋರಗಾಂವಿ, ಶ್ರೀಶೈಲ ಧಬಾಡಿ, ರಾಜೇಂದ್ರ ಅಂಬಲಿ, ಯುನುಸ್ ಚೌಗಲಾ, ಬುಡನ್ ಜಮಾದಾರ ಮುಂತಾದವರು ಮಾತನಾಡಿದರು.

ಮಲ್ಲಿಕಾರ್ಜುನ ಬಾಣಕಾರ, ಮಲ್ಲಿಕಾರ್ಜುನ ಭದ್ರನ್ನವರ, ಬಸವರಾಜ ದಲಾಲ, ಶಂಕರ ಜಾಲಿಗಿಡದ, ರಾಜಶೇಖರ ಮಾಲಾಪುರ, ಶ್ರೀಶೈಲ ಧಬಾಡಿ, ಈಶ್ವರ ಬಿದರಿ, ದಾನಪ್ಪ ಹುಲಜತ್ತಿ, ಚನವೀರಪ್ಪ ಹಾದಿಮನಿ, ಗುರಲಿಂಗಪ್ಪ ನ್ಯಾಮಗೌಡ, ವಿರುಪಾಕ್ಷಯ್ಯ ಕಂಬಿ, ಬಸವರಾಜ ಕಲೂತಿ, ಶಿವಾನಂದ ಜಿರಲಿ, ಗುರುಪಾದ ಮೆಂಡಿಗೇರ,

ಕಿರಣ ಪಿಸಾಳ, ಪ್ರವೀಣ ನಾವಂದರ, ಸಂದೀಪ ಹುಲ್ಯಾಳಕರ, ರಾಜೇಂದ್ರ ಅಂಬಲಿ, ಯೂನಸ್ ಚೌಗಲೆ, ಹಾಜಿ ಹೂವಾಯೂನ ಮುಧೋಳ, ಪ್ರಭುಲಿಂಗ ಜನವಾಡ, ನಂದೆಪ್ಪ ತಳವಾರ, ಮಹಾಲಿಂಗಪ್ಪ ತಳವಾರ, ಶೋಭಾ ಅರಕೇರಿ, ಶಭೀನಾ ಖುದಾವನ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಹೊಸೂರಿನ ಮಹಾದೇವ ಚೋಳಿ ಅವರ ಫಾರ್ಮ ಹೌಸ್‌ಗೆ ಕೃಷಿ ಸಚಿವರ ಭೇಟಿ



ರಬಕವಿ-ಬನಹಟ್ಟಿ ತಾಲೂಕಿನ ಹೊಸೂರ ಗ್ರಾಮದ ಪ್ರಗತಿಪರ ರೈತರಾದ ಮಹಾದೇವ ಚೋಳಿ ಅವರ ಫಾರ್ಮ ಹೌಸ್ಗೆ ಕೃಷಿ ಸಚಿವರಾದ ಎನ್. ಚೆಲುವರಾಯಸ್ವಾಮಿ ಭೆಟ್ಟಿ ನೀಡಿ ಅಲ್ಲಿ ಅವರು ಕೈಗೊಂಡ ಕೃಷಿಯ ಬಗ್ಗೆ ಮಾಹಿತಿ ಪಡೆದುಕೊಂಡರು.

ನಂತರ ಅವರು ಹೈನುಗಾರಿಕೆ ಮತ್ತು ಕೃಷಿಯ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಹಾದೇವ ಚೋಳಿ, ಸುಭಾಸ ಚೋಳಿ, ಕೃಷಿ ಸಚಿವರ ವಿಶೇಷ ಕರ್ತವ್ಯ ಅಧಿಕಾರಿ ಎ. ಬಿ. ಪಾಟೀಲ, ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪಿ.ಎಲ್.ಪಾಟೀಲ, ಕುಲಸಚಿವ ಡಾ. ಮಂಜುನಾಥ, ಜಾರಿ ದಳದ ಅಧಿಕಾರಿ ಬಸವರಾಜ ಮಾಳೆದ, ಕೃಷಿ ಇಲಾಖೆ ಅಧಿಕಾರಿ ಸಿದ್ದಪ್ಪ ಪಟ್ಟಿಹಾಳ, ಕೃಷಿ ಅಧಿಕಾರಿಗಳಾದ ಮೈನೋದ್ದಿನ್ ಜಮಖಂಡಿ, ಎಸ್.ಎಂ.ಬಿರಾದಾರ ಪಿಎಸ್ಐ ರಾಘವೇಂದ್ರ ಖೋತ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಅಜಯ ಬಾಬು ಬಿದರಿ ನಿಧನ

ಬನಹಟ್ಟಿ : ನಗರದ ಸೋಮವಾರ ಪೇಟೆ ಅಶೋಕ ಕಾಲನಿ ನಿವಾಸಿ ಬಣಜಿಗ ಸಮಾಜದ ಯುವ ಮುಖಂಡ ಅಜಯ ಬಾಬು ಬಿದರಿ ತಮ್ಮ 44 ನೆಯ ವಯಸ್ಸಿನಲ್ಲಿ ತೀವ್ರ ಸ್ವರೂಪದ ಹೃದಯಾಘಾತದಿಂದಾಗಿ ನಿಧನರಾಗಿದ್ದು, ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಡಿಸೆಂಬರ 14 ರಂದು ಮುಂಜಾನೆ ಒಂಭತ್ತು ಗಂಟೆಗೆ ಸೋಮವಾರ ಪೇಟೆ ದೈವ ಮಂಡಳಿಯ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ.

ಬನಹಟ್ಟಿ ಬಣಜಿಗ ಸಮಾಜ ಹಾಗೂ ಶ್ರೀ ಸೋಮವಾರ ಪೇಟೆ ಸಮಸ್ತ ದೈವ ಮಂಡಳ ಸಂತಾಪ ಸೂಚಿಸಿದೆ.

# ಮಹಾಲಿಂಗಪುರ ಪಿಕೆಪಿಎಸ್ ಅಧ್ಯಕ್ಷರಾಗಿ ಬಸನಗೌಡ ಪಾಟೀಲ್, ಉಪಾಧ್ಯಕ್ಷರಾಗಿ ಮಹಾಲಿಂಗಪ್ಪ ಪೂಜಾರಿ ಅವಿರೋಧ ಆಯ್ಕೆ



ಮಹಾಲಿಂಗಪುರ : ಪಟ್ಟಣದ ಪಿಕೆಪಿಎಸ್ ನ ನೂತನ ಅಧ್ಯಕ್ಷರಾಗಿ ಬಸನಗೌಡ ಮ. ಪಾಟೀಲ್ , ಉಪಾಧ್ಯಕ್ಷರಾಗಿ ಮಹಾಲಿಂಗಪ್ಪ ಸ.ಪೂಜಾರಿ ಅವಿರೋಧ ಆಯ್ಕೆಯಾದರು.

ಬುಧವಾರ ನಡೆದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳಿಗೆ ತಲಾ ಒಂದೊಂದು ನಾಮಪತ್ರ ಮಾತ್ರ ಸಲ್ಲಿಕೆಯಾದ್ದರಿಂದ ಮಹಾಲಿಂಗಪುರ ಪಿಕೆಪಿಎಸ್ ನ ನೂತನ ಅಧ್ಯಕ್ಷರಾಗಿ ಬಸನಗೌಡ ಮ. ಪಾಟೀಲ್ ಅಧ್ಯಕ್ಷರಾಗಿ, ಮಹಾಲಿಂಗಪ್ಪ ಸ.ಪೂಜಾರಿ ಉಪಾಧ್ಯಕ್ಷರಾಗಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ರಿಟರ್ನಿಂಗ್ ಆಫೀಸರ್ ಪಿ. ವ್ಹಿ. ಜಮಾದಾರ ಘೋಷಿಸಿದರು.

ಇದೇ ಸಂದರ್ಭದಲ್ಲಿ ಪಿಕೆಪಿಎಸ್ ಚುನಾವಣೆಯಲ್ಲಿ ಅವಿರೋಧ ಆಯ್ಕೆಯಾದ ಎಲ್ಲಾ ಸದಸ್ಯರಿಗೆ ಸದಸ್ಯತ್ವ ಪ್ರಮಾಣ ಪತ್ರಗಳನ್ನು ವಿತರಿಸಿದರು.

ಪಿಕೆಪಿಎಸ್ ನ ನೂತನ ಆಡಳಿತ ಮಂಡಳಿ ಸದಸ್ಯರಾದ ಮಲ್ಲಿಕಾರ್ಜುನ ಕುಳ್ಳೊಳ್ಳಿ, ವಿಷ್ಣುಗೌಡ ಪಾಟೀಲ್, ಶಿವಪ್ಪ ನಾಗನೂರ, ಬಸವರಾಜ ಅರಳಿಕಟ್ಟಿ, ಈರಪ್ಪ ದಿನ್ನಿಮನಿ, ಶೈಲಾ ಪವಾರ, ಸುರೇಖಾ ಸೈದಾಪೂರ, ಶಿವಲಿಂಗಪ್ಪ ಘಂಟಿ, ಹಣಮಂತ ಬುರುಡ, ಸಂಗಪ್ಪ ಡೋಣಿ, ಅಶೋಕಗೌಡ ಪಾಟೀಲ್ ಇದ್ದರು.

ನೂತನ ಅಧ್ಯಕ್ಷರಿಗೆ ಅಭಿನಂದನೆ : ಪಿಕೆಪಿಎಸ್ ನ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಸನಗೌಡ ಪಾಟೀಲ್ ಅವರನ್ನು ಪುರಸಭೆ ಮಾಜಿ ಅಧ್ಯಕ್ಷ ಬಸವರಾಜ ಹಿಟ್ಟಿನಮಠ, ಬಿಜೆಪಿ ಮುಖಂಡರಾದ ಮಹಾಲಿಂಗಪ್ಪ ಕುಳ್ಳೊಳ್ಳಿ, ಮಹಾಲಿಂಗಪ್ಪ ಕೌಜಲಗಿ, ಶಂಕರಗೌಡ ಪಾಟೀಲ್, ಮಹಾಲಿಂಗ ಮುದ್ದಾಪೂರ, ಅಲ್ಲಪ್ಪ ಪೂಜಾರಿ, ಪಿಕೆಪಿಎಸ್ ಮುಖ್ಯಕಾರ್ಯನಿರ್ವಾಹಕ ಈರಣ್ಣ ಬೆಟಗೇರಿ ಸೇರಿದಂತೆ ಹಲವರು ಇದ್ದರು.

# "ಬಾದಾಮಿ ಚಾಲುಕ್ಯ ಉತ್ಸವ-2024" ಅಧಿಕೃತ ಲಾಂಛನ ಬಿಡುಗಡೆ



ಬಾಗಲಕೋಟೆ : ಕಮತಗಿ ಪಟ್ಟಣದ ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘದ ವತಿಯಿಂದ 2024ನೇ ಜನವರಿ 6 ಮತ್ತು 7 ರಂದು ನಡೆಯಲಿರುವ "ಬಾದಾಮಿ ಚಾಲುಕ್ಯ ಉತ್ಸವ-2024"ರ ಅಧಿಕೃತ ಲಾಂಛನವನ್ನು ಬಾಗಲಕೋಟೆಯ ಕನ್ನಡ ಸಂಸ್ಕೃತಿ ಇಲಾಖೆಯ ಕಲಾ ಭವನದ ಆವರಣದಲ್ಲಿ ಬಿಡುಗಡೆಗೊಳಿಸಲಾಯಿತು.

ಸಂಘದ ಅಧ್ಯಕ್ಷರಾದ ಎಮ್. ರಮೇಶ ಕಮತಗಿ ಮಾತನಾಡಿ, ಉತ್ಸವದಲ್ಲಿ ಜಾನಪದ ಕಲಾ ತಂಡಗಳೊಂದಿಗೆ ಇಮ್ಮಡಿ ಪುಲಕೇಶಿ ಅವರ ಭಾವಚಿತ್ರ ಮೆರವಣಿಗೆ, ವೇದಿಕೆಯಲ್ಲಿ ಯುವ ಕವಿಗೋಷ್ಠಿ, ಪ್ರಧಾನ ಕವಿಗೋಷ್ಠಿ, ಮಹಿಳಾ ಕವಿಗೋಷ್ಠಿ, ಗಜಲ್ ಗೋಷ್ಠಿ, ವಚನ ಗೋಷ್ಠಿ, ವಿಚಾರ ಗೋಷ್ಠಿ, ರೈತಗೋಷ್ಠಿ, ಮಕ್ಕಳ ಕವಿಗೋಷ್ಠಿ, 25 ಪುಸ್ತಕಗಳ ಬಿಡುಗಡೆ, ಕಲಾ ಪ್ರದರ್ಶನ, ಹಾಸ್ಯ ಗೋಷ್ಠಿ, ನಾಟಕ ಪ್ರದರ್ಶನ, ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗವುದು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಸಲಾಗುವದು ಆದ್ದರಿಂದ ಎಲ್ಲರೂ ಜೊತೆಗೂಡಿ ಉತ್ಸವವನ್ನು ಯಶಸ್ವಿಗೊಳಿಸೋಣ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಬಾಗಲಕೋಟೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಶ್ರೀಶೈಲ್ ಕರಿಶಂಕರಿ, ಜಿಲ್ಲಾ ಪತ್ರಕರ್ತ ಸಂಘದ ಅಧ್ಯಕ್ಷರಾದ ಆನಂದ ಧಲಬಂಜನ, ಹಿರಿಯ ಸಾಹಿತಿಗಳಾದ ಡಾ. ಪ್ರಕಾಶ ಖಾಡೆ, ಸಾಹಿತಿ ಡಾ. ಬಸವರಾಜ ಕುಂಬಾರ, ಪ್ರಾಚಾರ್ಯ ಅಶೋಕ ಕಂದಗಲ್, ಕನ್ನಡಪರ ಹೋರಾಟಗಾರ ಹಾಗೂ ವಕೀಲರಾದ ರಮೇಶ ಬದ್ನೂರ್, ಬಾದಾಮಿಯ ವ್ಯಂಗ್ಯ ಚಿತ್ರಕಾರ ವೆಂಕಟೇಶ್ ಇನಾಮದಾರ, ಸಾಹಿತಿ ಪುಂಡಲಿಕ್ ಹಲಕುರ್ಕಿ, ಚಾಲುಕ್ಯ ಉತ್ಸವದ ಸಂಚಾಲಕರಾದ ಮುತ್ತು ಬಳ್ಳಾ, ಪತ್ರಕರ್ತ ಅಲ್ತಾಫ್ ಧಾರವಾಡ ಹಾಗೂ ಇತರರು ಇದ್ದರು.

# ಅಧ್ಯಕ್ಷ ಬಂಗಾರಶೆಟ್ಟರ, ಉಪಾಧ್ಯಕ್ಷ ವಿರಕ್ತಮಠ ಅವಿರೋಧ ಆಯ್ಕೆ



ಬಾಗಲಕೋಟೆ: ಸ್ಥಳೀಯ ವಿದ್ಯಾಶ್ರೀ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ವೀರಣ್ಣ ಎಸ್. ಬಂಗಾರಶೆಟ್ಟರ ಹಾಗೂ ಉಪಾಧ್ಯಕ್ಷರಾಗಿ ವಿನಯ ವಿರಕ್ತಮಠ ಇವರಿಗಳು ಮುಂದಿನ 5 ವರ್ಷಗಳಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಸಂಘ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇತ್ತೀಚಿಗೆ ನಡೆದ ಸಭೆಯಲ್ಲಿ ಆಯ್ಕೆ ಪ್ರಕ್ರಿಯೆ ನಡೆಯಿತು. ನಿರ್ದೇಶಕರಾದ ಲಾಲಮಹಾರಾಜ ಪಿ.ಗೌಡ, ಚಂದ್ರಶೇಖರ ಮ. ದೊಡ್ಡಮನಿ, ಟಿ.ವಿ.ಆರ್. ಸತ್ಯನಾರಾಯಣ, ವೆಂಕಟೇಶೆಸ್. ರಾಮ್, ಗೋವಿಂದ ಎಸ್. ಮುಳಗುಂದ, ಮಹೇಶ ಎಸ್. ಆರಬ್ಬಿ, ಪ್ರಶಾಂತ ವಿ. ಝಿಂಗಾಡೆ, ಲಕ್ಷ್ಮಣ ಅ. ಯಲಗನ್ನವರ, ಉಮೇಶ ಕೃ. ನಾಯಕ, ಯಲ್ಲಪ್ಪ ಶಿ. ಕ್ಯಾದಿಗೇರಿ, ಶಿವಕುಮಾರ ಜಕಾತಿ, ಶ್ರೀಮತಿ ಪವಿತ್ರಾ ಬ. ಶಿವಪೂಜಿ, ಶ್ರೀಮತಿ ಉಷಾದೇವಿ ಅ. ಕಲ್ಯಾಣಶೆಟ್ಟಿ ಇದ್ದರು.

# ಕೃಷ್ಣಪ್ಪ ಮೇಗಾಡಿ ನಿಧನ



ತೇರದಾಳ : ಇಲ್ಲಿಯ ಕುರುಹಿನಶೆಟ್ಟಿ ಸಮಾಜದ ಹಿರಿಯರು, ಕುರುಹಿನಶೆಟ್ಟಿ ಸಂಘದ ಮಾಜಿ ಅಧ್ಯಕ್ಷರೂ ಆದ ಕೃಷ್ಣಪ್ಪ ಬಸಪ್ಪ ಮೇಗಾಡಿ (74) ಇತ್ತೀಚಿಗೆ ನಿಧನರಾದರು.

ಸಮಾಜಸೇವೆ, ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಅವರು 30 ವರ್ಷಗಳವರೆಗೆ ಸಂಘದ ಅಧ್ಯಕ್ಷರಾಗಿ ಸೇವೆಗೈದವರು. ವರ್ಕ್ ಇನ್ಸಪೆಕ್ಟರ್ ಆಗಿ ನೀರಾವರಿ ಇಲಾಖೆಯಲ್ಲಿ ಸೇವೆಗೈದು ನಿವೃತ್ತರಾಗಿದ್ದಾರೆ.

ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ರಬಕವಿ-ಬನಹಟ್ಟಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮ.ಕೃ. ಮೇಗಾಡಿ ಅವರು ಮೃತರ ಪುತ್ರರಲ್ಲಿ ಒಬ್ಬರು.

ಬೆಂಗಳೂರಿನ ನೇಯ್ಗೆ ನುಡಿ ಮಾಸ ಪತ್ರಿಕೆಯ ಸಂಪಾದಕರಾದ ಬೆಳ್ಳಿ ಚುಕ್ಕಿ ವೀರೇಂದ್ರ ಸೇರಿದಂತೆ ವಿವಿಧ ಸಮಾಜಗಳ ಹಿರಿಯರು, ಮುಖಂಡರು, ಸಮಾಜ ಬಾಂಧವರು ಅಪಾರ ಸಂಖ್ಯೆಯಲ್ಲಿ ಮೃತರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ್ದರು.

# ಸಿದ್ದವ್ವ ಬನಹಟ್ಟಿ ನಿಧನ



ಮಹಾಲಿಂಗಪುರ: ಸಮೀಪದ ಸೈದಾಪುರ ಗ್ರಾಮದ ನಿವಾಸಿ, ಶತಾಯುಷಿ ಸಿದ್ದವ್ವ ಲಗಮಣ್ಣ ಬನಹಟ್ಟಿ ತಮ್ಮ 105 ನೆಯ ವಯಸ್ಸಿನಲ್ಲಿ ಡಿಸೆಂಬರ್ ಹತ್ತರಂದು ನಿಧನರಾದರು. ಮೃತರು ತಮ್ಮ ಹಿಂದೆ ಆರು ಜನ ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಡಾ.ಶ್ರೀ ಪಂ.ಪುಟ್ಟರಾಜ ಗವಾಯಿಗಳವರ ಕಾರ್ತಿಕೋತ್ಸವ

ಗದಗ : ನಗರದ ಶ್ರೀ ಪುಟ್ಟರಾಜ ಸರ್ಕಲ್‌ನಲ್ಲಿ ಶ್ರೀ ಪಂ. ಪುಟ್ಟರಾಜ ಸಮಾಜ ಸೇವಾ ಟ್ರಸ್ಟ್ ವೀರನಾರಾಯಣ ಬಡಾವಣೆ ಎ.ಪಿ.ಎಂ.ಸಿ. ಹಿಂದುಗಡೆ ಇವರ ವತಿಯಿಂದ ಡಾ. ಶ್ರೀ ಪಂ. ಪುಟ್ಟರಾಜ ಗವಾಯಿಗಳವರ ಕಾರ್ತಿಕೋತ್ಸವ ಕಾರ್ಯಕ್ರಮ ದಿನಾಂಕ: 13-12-2023 ರಂದು ಜರುಗಿತು.

ಈ ಕಾರ್ಯಕ್ರಮದಲ್ಲಿ ಟ್ರಸ್ಟಿನ ಅಧ್ಯಕ್ಷರಾದ ಶಿದ್ರಾಮಯ್ಯ ಕಟಗಿಹಳ್ಳಿಮಠ, ಉಪಾಧ್ಯಕ್ಷರಾದ ಬಸವನಗೌಡ ಪಾಟೀಲ, ಸದಸ್ಯರುಗಳಾದ ಗಂಗಾಧರ ಬೆಣಕಲ್, ಬಸವರಾಜ ಡಾವಣಗೇರಿ, ಮಹಾಂತೇಶ ಲಗಳಿ, ಈಶಪ್ಪ ಅಂಗಡಿ, ಭೀಮಪ್ಪ ಮುಕಾಶಿ, ಮಂಜುನಾಥ ಕ್ಯಾಡದ ಹಾಗೂ ಓಣಿಯ ಹಿರಿಯರಾದ ಶಿವಪ್ಪ ಲಗಳಿ, ಪಟ್ಟದಕಲ್ಲ ಸರ್, ಸುನೀಲ ಚಿನ್ನಾಪೂರ, ರಾಜು ಕೊಟ್ಟೂರಶೆಟ್ಟರ ಹಾಗೂ ಯುವಕರಾದ ಬಸವರಾಜ ದೊಡ್ಡಮನಿ, ಸಿದ್ಧಲಿಂಗಸ್ವಾಮಿ ಹಿರೇಗೌಡರ, ಮಂಜುನಾಥ ಕೊರ್ಲಹಳ್ಳಿ, ಮಲ್ಲು ಬೆಣ್ಣಿ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಸೇರಿ ಕಾರ್ತಿಕೋತ್ಸವದ ಕಾರ್ಯಕ್ರಮವನ್ನು ಅದ್ದೂರಿಯಾಗಿ ನೆರವೇರಿಸಲಾಯಿತು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State